# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೫<br>Part – V | ಬೆಂಗಳೂರು, ಮಂಗಳವಾರ, ೧೧, ಆಗಸ್ಟ್, ೨೦೨೬ (ಶ್ರಾವಣ, ೨೦, ಶಕವರ್ಷ, ೧೯೪೮)<br>BENGALURU, TUESDAY, 11, AUGUST, 2026 ( SHRAVANA , 20, SHAKAVARSHA, 1948) | ನಂ. ೬೨೨<br>No. 622 |
|---|---|---|

**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ**

**ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾ ಉಪನಿರ್ದೇಶಕರು(ಆಡಳಿತ),**

**ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ**

**ಸಂಖ್ಯೆ: ಆ2/ಸ.ಪ್ರಾ.ಶಾ.ಶಿ ನೇಮಕಾತಿ/20/2026-27** **ದಿನಾಂಕ : 11-08-2026**

# ಅಧಿಸೂಚನೆ

ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ) ವೃಂದದ ಹುದ್ದೆಗಳಿಗೆ ಹಾಗೂ ಗಣಕ ವಿಜ್ಞಾನ ಶಿಕ್ಷಕರ (1 ರಿಂದ 8 ನೇ ತರಗತಿ) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಅಂದರೆ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಶಾಲಾ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2026 ಸಂಖ್ಯೆ: ಇಪಿ 80 ಡಿಪಿಐ 2026, ದಿನಾಂಕ:10-08-2026 ರ ನಿಯಮಗಳನ್ವಯ ಆಯ್ಕೆ ಮಾಡಲು ಈ ನೇಮಕಾತಿ ಅಧಿಸೂಚನೆ ಹೊರಡಿಸಿದೆ. ನೇಮಕಾತಿಗೆ ಅರ್ಜಿ ಸಲ್ಲಿಸಲು ದಿನಾಂಕ: 18-08-2026 ರಿಂದ 07-09-2026 ರವರೆಗೆ ಅವಕಾಶ ಕಲ್ಪಿಸಿದೆ. ನಿಗದಿ ಪಡಿಸಿದ ಕೊನೆಯ ದಿನ ಅಂದರೆ ದಿನಾಂಕ:-07-09-2026 ಕ್ಕೆ ನಿಯಮಾನುಸಾರ ಅರ್ಹರಾಗಿರುವ ಅಭ್ಯರ್ಥಿಗಳಿಂದ ನಿಗದಿಪಡಿಸಿರುವ ಅರ್ಜಿ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಟಿಪ್ಪಣಿ:
1. ಈ ಅಧಿಸೂಚನೆಯು ಸರ್ಕಾರವು ಕಾಲಕಾಲಕ್ಕೆ ಹೊರಡಿಸಲಾದ ನಿಯಮಗಳು, ಆದೇಶಗಳು ಮತ್ತು ತಿದ್ದುಪಡಿಗಳಿಗೆ ಒಳಪಟ್ಟಿರುತ್ತದೆ.
2. ಈಗ ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಬದಲಾವಣೆಗೆ ಒಳಪಟ್ಟಿರುತ್ತದೆ.

**01] ಭರ್ತಿ ಮಾಡಲು ಪ್ರಸ್ತಾಪಿಸಿರುವ ಖಾಲಿ ಹುದ್ದೆಗಳ ಮಾಹಿತಿ:**

| ಕ್ರ. ಸಂ | ಕಲ್ಯಾಣ ಕರ್ನಾಟಕೇತರ ಜಿಲ್ಲೆಗಳ ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 01 | GPT-ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಕನ್ನಡ ಭಾಷೆ) (6 ರಿಂದ 8ನೇ ತರಗತಿ) | 32 |
| 02 | GPT-ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಆಂಗ್ಲ ಭಾಷೆ) (6 ರಿಂದ 8ನೇ ತರಗತಿ) | 11 |
| 03 | GPT-ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಗಣಿತ ಮತ್ತು ವಿಜ್ಞಾನ) (6 ರಿಂದ 8ನೇ ತರಗತಿ) | 61 |
| 04 | GPT-ಪದವೀಧರ ಪ್ರಾಥಮಿಕ ಶಿಕ್ಷಕ (ಜೀವವಿಜ್ಞಾನ) (6 ರಿಂದ 8ನೇ ತರಗತಿ) | 04 |
| 05 | GPT-ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಸಮಾಜ ವಿಜ್ಞಾನ) (6 ರಿಂದ 8ನೇ ತರಗತಿ) | 25 |
| 06 | CST-ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) CST | 06 |
| ಒಟ್ಟು | | 139 |

**ಸೂಚನೆ:** ವಿಷಯವಾರು, ಮಾಧ್ಯಮವಾರು ಹಾಗೂ ಪ್ರವರ್ಗವಾರು ಖಾಲಿ ಹುದ್ದೆಗಳ ಸಂಖ್ಯೆ ಮೀಸಲಾತಿ ವರ್ಗೀಕರಣ ವಿವರಗಳನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ಹುದ್ದೆಗಳ ವರ್ಗೀಕರಣದ ಅನುಬಂಧದಲ್ಲಿ ಪ್ರತ್ಯೇಕವಾಗಿ

ವಿವರಿಸಿದೆ. ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

**02] ನಿಗದಿತ ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ:**

ಅಭ್ಯರ್ಥಿಯು ಶಾಲಾ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್ : [https://schooleducation.kar.nic.in] ಮುಖಾಂತರ ಆನ್‌ಲೈನ್ [ONLINE] ಮೂಲಕವೇ ಅರ್ಜಿ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ಭೌತಿಕವಾಗಿ ಅಥವಾ ಇನ್ಯಾವುದೇ ರೂಪದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮೊದಲು USER Name and Password ನ್ನು ನಮೂದಿಸಿ ನೋಂದಾಯಿಸಿಕೊಳ್ಳಬೇಕು. ನಂತರ ಅರ್ಜಿಯಲ್ಲಿ ವಿವರಗಳನ್ನು ತುಂಬಲು ನೋಂದಾಯಿಸಿದ USER Name and Password ಅನ್ನು ಬಳಸಿ Login ಆಗಬೇಕು. ಅರ್ಜಿ ಭರ್ತಿ ಮಾಡಿದ ನಂತರ ನಿಗದಿತ ಶುಲ್ಕ ಪಾವತಿಸುವುದು ಹಾಗೂ ಅರ್ಜಿಯನ್ನು ಮುದ್ರಿಸಿಟ್ಟುಕೊಳ್ಳುವುದು ಮತ್ತು ಸದರಿ USER Name and Password ಅನ್ನು ನೇಮಕಾತಿ ಪ್ರಕ್ರಿಯೆಯು ಮುಗಿಯುವವರೆಗೂ ಸಂರಕ್ಷಿಸಿಟ್ಟುಕೊಳ್ಳುವುದು ಅತ್ಯವಶ್ಯಕವಾಗಿದೆ.

**03] ಸಾಮಾನ್ಯ ಸೂಚನೆಗಳು :**

ಅರ್ಜಿ ಶುಲ್ಕವನ್ನು"ONLINE" ಮೂಲಕ ಅಂದರೆ INTERNET BANKING / CREDIT CARD / DEBIT CARD ಅಥವಾ ONLINE ಬ್ಯಾಂಕ್ ಚಲನ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ) ಮೂಲಕ ಶುಲ್ಕ ಪಾವತಿಸುವುದು. ಇನ್ಯಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. INTERNET CRASH ಅನ್ನು ತಪ್ಪಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿಯೇ ಅರ್ಜಿ ಸಲ್ಲಿಸುವುದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಹಾಗೂ ಸದರಿ ಶುಲ್ಕವನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಮರು ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ. ಅರ್ಜಿಯನ್ನು ಸಲ್ಲಿಸುವ (SUBMIT) ಮುನ್ನ ಭರ್ತಿ ಮಾಡಿರುವ ಎಲ್ಲಾ ಮಾಹಿತಿಗಳು ಸರಿಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.

i. 2026ನೇ ಸಾಲಿನ PST, GPT, HST ನೇಮಕಾತಿಗೆ ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಲಾಗಿದೆ. ಆದಾಗ್ಯೂ 2026ನೇ ಸಾಲಿನ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧಿಸೂಚನೆಗಳನ್ನು ಹೊರಡಿಸಿದ್ದರೂ ಸಹ ಸದರಿ ಅಧಿಸೂಚನೆಯಲ್ಲಿ ನಮೂದಿಸಿದ ವಿವಿಧ ವೃಂದಗಳಿಗೆ (PST, GPT, HST) ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ **ಒಂದೇ Online ಅರ್ಜಿಯಲ್ಲಿ** ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ii. ಅಭ್ಯರ್ಥಿಯು ಯಾವ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುತ್ತಾರೋ, ಆ ಹುದ್ದೆಗೆ ಸಂಬಂಧಿಸಿದಂತೆ ದಿನಾಂಕ : 10-08-2026 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 80 ಡಿಪಿಐ 2026 ರಲ್ಲಿ ಪ್ರಕಟಿಸಲಾದ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಶಾಲಾ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು,-2026 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರಬೇಕು.

iii. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಒಂದು ವೃಂದದ ಒಂದು ಹುದ್ದೆಗೆ ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಒಂದು ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚಿನ ವೃಂದಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅದೇ ರೀತಿ, ಬೇರೆ ಬೇರೆ ವೃಂದದ ಬೇರೆ ಬೇರೆ ಹುದ್ದೆಗಳಿಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

iv. ಪ್ರೌಢಶಾಲಾ ಸಹಶಿಕ್ಷಕರು (AM) ಮತ್ತು ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-I (PE-Grade-I) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಒಂದು ವೃಂದಕ್ಕೆ, ಒಂದು (01) ವಿಭಾಗದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಯಾವುದಾದರೂ ಒಂದು ವಿಭಾಗದಲ್ಲಿ ಒಂದಕ್ಕಿಂತ ಹೆಚ್ಚಿನ ವೃಂದದ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. ಅದೇ ರೀತಿ ಬೇರೆ ಬೇರೆ ವೃಂದಕ್ಕೆ ಬೇರೆ ಬೇರೆ ವಿಭಾಗದಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. **ಪರೀಕ್ಷೆ ಬರೆಯಲು ಒಂದು ಜಿಲ್ಲೆಯನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು**. ಆದರೆ ಪ್ರತಿ ವೃಂದಕ್ಕೂ ಪ್ರತ್ಯೇಕವಾಗಿ ಶುಲ್ಕ ಪಾವತಿಸುವುದು ಕಡ್ಡಾಯ.

**ಉದಾ:-**ಯಾವೊಬ್ಬ ಅಭ್ಯರ್ಥಿಯ ವಿದ್ಯಾರ್ಹತೆಯು PST ವೃಂದದಲ್ಲಿ PST-ಸಾಮಾನ್ಯ, PE-Grade-II, ಎರಡೂ ಹುದ್ದೆಗೆ ಹಾಗೂ GPT ವೃಂದದಲ್ಲಿ GPT (KAN)/ GPT (ENG)/ GPT (SS)/ GPT (M&S)/ GPT (Bio-Science), GPT (CST 1 to 8) / HST ವೃಂದದಲ್ಲಿ AM_KAN / AM_ENG/ AM_Arts / AM_CBZ / PE-Grade-I ಅಧಿಸೂಚಿತ ಮೂರೂ ವೃಂದದ ಹುದ್ದೆಗಳಿಗೂ ಅರ್ಹವಾಗಿದ್ದಲ್ಲಿ, ಅಭ್ಯರ್ಥಿಯು ಬಯಸಿದಲ್ಲಿ, ಮೂರೂ ವೃಂದದ ಹುದ್ದೆಗಳಿಗೂ ಒಂದಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ / ವಿಭಾಗಗಳಲ್ಲಿ ಪ್ರತ್ಯೇಕ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಒಂದು ವೃಂದದ ಒಂದು ಹುದ್ದೆಗೆ ಒಂದು ಜಿಲ್ಲೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅಂದರೆ PST ವೃಂದದ ಅಭ್ಯರ್ಥಿಯು ಬಾಗಲಕೋಟೆ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿದರೆ, ಬೇರೆ ಯಾವುದೇ ಜಿಲ್ಲೆಯಲ್ಲಿ PST ವೃಂದದ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅದೇ ರೀತಿ ಯಾವೊಬ್ಬ ಅಭ್ಯರ್ಥಿಯು GPT-SS ಹುದ್ದೆಗೆ ಮೈಸೂರು ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಆತನು ಬೇರೆ ಜಿಲ್ಲೆಯಲ್ಲಿ GPT-SS ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಆದರೆ, GPT-M & S, GPT-KAN, GPT-ENG, GPT-BIO-SCIENCE, CST- 1 ರಿಂದ 8 ಹುದ್ದೆಗಳಿಗೆ ಅಭ್ಯರ್ಥಿ ವಿದ್ಯಾರ್ಹತೆಗೆ ತಕ್ಕಂತೆ ಮೈಸೂರು ಅಥವಾ

ಬೇರೆ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅದೇ ರೀತಿ ಯಾವೊಬ್ಬ ಅಭ್ಯರ್ಥಿಯು AM_ENG ಹುದ್ದೆಗೆ ಬೆಂಗಳೂರು ವಿಭಾಗದಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಆತನು AM_ENG ಹುದ್ದೆಗೆ ಬೇರೆ ವಿಭಾಗಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಆದರೆ ಆತನು AM_KAN, AM_CBZ, AM_ARTS, PE-GRADE-1 ಹುದ್ದೆಗಳಿಗೆ ಬೇರೆ ವಿಭಾಗಗಳಲ್ಲಿ ಅಭ್ಯರ್ಥಿ ವಿದ್ಯಾರ್ಹತೆಗೆ ತಕ್ಕಂತೆ ಅರ್ಜಿ ಸಲ್ಲಿಸಬಹುದಾಗಿದೆ.

v. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ವೃಂದದ ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಅವರು ಯಾವ ವೃಂದದ ಯಾವ ಹುದ್ದೆಗೆ ಆಯ್ಕೆಯಾಗಲು ಬಯಸುತ್ತಾರೋ ಅಂತಹ ವೃಂದದ ಹುದ್ದೆಯ ತಾತ್ಕಾಲಿಕ ಆದ್ಯತೆಯನ್ನು ಅರ್ಜಿ ಸಲ್ಲಿಸುವಾಗ ನೀಡುವುದು ಕಡ್ಡಾಯವಾಗಿರುತ್ತದೆ.

vi. ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಬಯಸುವ ಜಿಲ್ಲೆಯ ಆದ್ಯತೆಯನ್ನು ಅರ್ಜಿಯಲ್ಲಿ ತಪ್ಪದೇ ನಮೂದಿಸತಕ್ಕದ್ದು. ಆದರೆ, ಪರೀಕ್ಷಾ ಕೇಂದ್ರದ ಹಂಚಿಕೆಯನ್ನು ಅಭ್ಯರ್ಥಿಗಳ ಸಂಖ್ಯೆ, ಪರೀಕ್ಷಾ ಕೇಂದ್ರಗಳ ಲಭ್ಯತೆಯ ಆಧಾರದ ಮೇಲೆ ಮಾಡಲಾಗುವುದು.

vii. ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡುವಾಗ ವಿಶೇಷ ಚೇತನ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುವುದು.

viii. ಅಭ್ಯರ್ಥಿಯು Online ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡ ಹುದ್ದೆಯ ವೃಂದದ ಅಧಿಸೂಚನೆಗಳನ್ನು (PST ವೃಂದ, GPT ವೃಂದ, HST ವೃಂದ) ಸ್ಪಷ್ಟವಾಗಿ ನಮೂದಿಸಬೇಕು.

ix. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

x. ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಭರ್ತಿ ಮಾಡಬೇಕಾಗಿದ್ದು, ಈ ಬಗ್ಗೆ ವಿವರಗಳನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

xi. ಈ ಅಧಿಸೂಚನೆಗೆ ಅನುಸಾರವಾಗಿ ಸಲ್ಲಿಸಿದ ಅರ್ಜಿಯನ್ನು ಇಲಾಖೆಯು ನಡೆಸುವ ಇತರೆ ಅಧಿಸೂಚನೆಗಳ ಆಯ್ಕೆ ಪರೀಕ್ಷೆಗಳಿಗೆ ಪರಿಗಣಿಸಲಾಗುವುದಿಲ್ಲ.

xii. ಶುಲ್ಕ ಪಾವತಿಸಿದ ನಂತರ ಅಭ್ಯರ್ಥಿಯು ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆದುಕೊಳ್ಳುವುದು. ಮುದ್ರಿತ ಅರ್ಜಿಯಲ್ಲಿನ ಅರ್ಜಿ ಸಂಖ್ಯೆಯು ಈ ನೇಮಕಾತಿಯ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಅವಶ್ಯಕವಾಗಿರುವುದರಿಂದ ಅರ್ಜಿಯ ಸಂಖ್ಯೆಯನ್ನು/ಮುದ್ರಿತ ಅರ್ಜಿ ಪ್ರತಿಯನ್ನು ಹಾಗೂ User Name and Password ಅನ್ನು ಅಭ್ಯರ್ಥಿಯು ಕಡ್ಡಾಯವಾಗಿ ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸಿಟ್ಟುಕೊಳ್ಳಬೇಕು.

xiii. ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಗೆ ನೀಡಿರುವ ನೊಂದಣಿ ಸಂಖ್ಯೆಯನ್ನು ನಮೂದಿಸಿ, ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರವನ್ನು ಇಲಾಖಾ ವೆಬ್‌ಸೈಟ್ [https://schooleducation.karnataka.gov.in] ನಿಂದ ಡೌನ್ ಲೋಡ್ ಮಾಡಿಕೊಳ್ಳಬೇಕು. ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ಅವಧಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

**4] ಆನ್‌ಲೈನ್ ಅರ್ಜಿ ಸಲ್ಲಿಸಲು ವೇಳಾಪಟ್ಟಿ**

| ಕ್ರ. ಸಂ | ವಿವರ | ದಿನಾಂಕ |
|---|---|---|
| 01 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: | 18-08-2026 |
| 02 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 07-09-2026 |
| 03 | ಪಾವತಿಸಿರುವ ಶುಲ್ಕವನ್ನು ಖಚಿತ ಪಡಿಸಿಕೊಳ್ಳುವ ಕೊನೆಯ ದಿನಾಂಕ : | 10-09-2026 |

**5] ಪಾವತಿಸಬೇಕಾದ ಶುಲ್ಕ:**

| ಕ್ರ. ಸಂ | ವಿವರ | ಒಂದು ವೃಂದದ ಒಂದು ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ರೂ.ಗಳಲ್ಲಿ | ಒಂದೇ ವೃಂದದ ಎರಡು ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ರೂ.ಗಳಲ್ಲಿ |
|---|---|---|---|
| 01 | ಸಾಮಾನ್ಯ ಅರ್ಹತೆ ಮತ್ತು ಇತರೆ ಹಿಂದುಳಿದ ಪ್ರವರ್ಗಗಳು (ಪ್ರವರ್ಗ –II(a) / II(b) / III(a) / III(b)) | 750/- | 1125/- |
| 02 | ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ/ ಪ್ರವರ್ಗ-1/ಮಾಜಿ ಸೈನಿಕ/ ಅಂಗವೈಕಲ್ಯತೆಯನ್ನುಳ್ಳ ಅಭ್ಯರ್ಥಿಗಳು ಹಾಗೂ ತೃತೀಯ ಲಿಂಗದ ಅಭ್ಯರ್ಥಿಗಳು | 500/- | 750/- |

**ವಿ.ಸೂ:** ಒಂದೇ ವೃಂದದಲ್ಲಿ ಎರಡಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ, ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ: 01ರ ಅಭ್ಯರ್ಥಿಗಳು ಪ್ರತಿ ಹೆಚ್ಚುವರಿ ಹುದ್ದೆಗೆ ಹೆಚ್ಚುವರಿಯಾಗಿ ರೂ. 375/- ಗಳನ್ನು ಪಾವತಿಸಬೇಕಾಗುತ್ತದೆ. ಅದೇ ರೀತಿಯಾಗಿ ಮೇಲಿನ ಕೋಷ್ಟಕದ ಕ್ರಮ ಸಂಖ್ಯೆ: 02ರ ಅಭ್ಯರ್ಥಿಗಳು ಪ್ರತಿ ಹೆಚ್ಚುವರಿ ಹುದ್ದೆಗೆ ಹೆಚ್ಚುವರಿಯಾಗಿ ರೂ.250/- ರೂಗಳನ್ನು ಪಾವತಿಸಬೇಕಾಗುತ್ತದೆ. ಅಭ್ಯರ್ಥಿಗಳು ಒಂದು ವೃಂದಕ್ಕಿಂತ ಹೆಚ್ಚಿನ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪರೀಕ್ಷಾ ಶುಲ್ಕವನ್ನು ಆಯಾ ಹುದ್ದೆಗೆ ಅನುಗುಣವಾಗಿ ಆತನು ಬರೆಯಬೇಕಾದ ಪತ್ರಿಕೆಗಳ ಸಂಖ್ಯೆಗೆ ಅನುಗುಣವಾಗಿ ಭರಿಸತಕ್ಕದ್ದು. **ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.**

i. ಅಧಿಸೂಚಿತ ವಿವಿಧ ವೃಂದದ **(PST ವೃಂದ, GPT ವೃಂದ, HST ವೃಂದ, PE ಗ್ರೇಡ್-1 & ಗ್ರೇಡ್-2, CST)** ವಿವಿಧ ವಿಷಯದ ಹುದ್ದೆಗಳಿಗೆ ಒಂದೇ ಅರ್ಜಿ ನಮೂನೆಯನ್ನು ನಿಗದಿಪಡಿಸಿದ್ದು, ಅಭ್ಯರ್ಥಿಗಳು ಅರ್ಹರಿದ್ದಲ್ಲಿ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ವೃಂದವಾರು ಪ್ರತ್ಯೇಕವಾಗಿ ಶುಲ್ಕ ಪಾವತಿಸುವುದು.

ii. ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ-1 ಮತ್ತು ಪತ್ರಿಕೆ-2ರ ಪ್ರಶ್ನೆ ಪತ್ರಿಕೆಗಳು ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮದಲ್ಲಿರುತ್ತವೆ.

iii. ಅಧಿಸೂಚಿತ ವೃಂದದ **(GPT ವೃಂದ, CST)** ವಿವಿಧ ವಿಷಯದ ಹುದ್ದೆಗಳಿಗೆ ಒಂದೇ ಅರ್ಜಿ ನಮೂನೆಯನ್ನು ನಿಗದಿಪಡಿಸಿದ್ದು, ಅಭ್ಯರ್ಥಿಗಳು ಅರ್ಹರಿದ್ದಲ್ಲಿ ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹುದ್ದೆವಾರು ಪ್ರತ್ಯೇಕವಾಗಿ ಶುಲ್ಕ ಪಾವತಿಸುವುದು.

**6] ವೇತನ ಶ್ರೇಣಿ:**

**ವೇತನ ಶ್ರೇಣಿ** : ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಗಣಕ ವಿಜ್ಞಾನ ಶಿಕ್ಷಕರ ಹುದ್ದೆಗಳಿಗೆ ಸಂಬಂಧಿಸಿದಂತೆ**. ರೂ. 44425 – 1125 – 47800 – 1250 – 52800 – 1375 – 58300 – 1500 – 64300 – 1650 -74200 – 1900 – 83700** ಅನ್ನು ನಿಗದಿಪಡಿಸಲಾಗಿದೆ.

**7] ವಯೋಮಿತಿ**:

ದಿನಾಂಕ : 10-08-2026 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 80 ಡಿಪಿಐ 2026 ರಲ್ಲಿ ಪ್ರಕಟಿಸಲಾದ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಶಾಲಾ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2026ರಲ್ಲಿ ನಿಗದಿಪಡಿಸಿರುವಂತೆ ನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕನಿಷ್ಠ 21 ವರ್ಷ ವಯಸ್ಸನ್ನು ಪೂರೈಸಿರಬೇಕು ಹಾಗೂ ಕೆಳಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ವಯಸ್ಸಿನ ಮಿತಿಯನ್ನು ಮೀರಿರಬಾರದು:

| **ಕ್ರ. ಸಂ** | **ವಿವರ** | **ಗರಿಷ್ಠ ವಯೋಮಿತಿ** |
|---|---|---|
| 01 | ಸಾಮಾನ್ಯ ಅರ್ಹತೆ (ಇತರೆ) | 40 ವರ್ಷಗಳು |
| 02 | ವರ್ಗ-IIA, ವರ್ಗ-IIB, ವರ್ಗ-IIIA ಮತ್ತು ವರ್ಗ-IIIB | 43 ವರ್ಷಗಳು |
| 03 | ಪರಿಶಿಷ್ಟಜಾತಿಗಳು(SC), ಪರಿಶಿಷ್ಟ ಪಂಗಡಗಳು (ST), ಪ್ರುವರ್ಗ-I ಮತ್ತು ವಿಶೇಷ ಚೇತನ ಅಭ್ಯರ್ಥಿಗಳು | 45 ವರ್ಷಗಳು |

**8] ಆಯ್ಕೆಗೆ ಅರ್ಹತೆ:**

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇತರಗತಿ) (ಕನ್ನಡ ಭಾಷಾ ಶಿಕ್ಷಕ, ಆಂಗ್ಲ ಭಾಷಾ ಶಿಕ್ಷಕ, ಗಣಿತ ಮತ್ತು ವಿಜ್ಞಾನ ಶಿಕ್ಷಕ, ಜೀವ-ವಿಜ್ಞಾನ ಶಿಕ್ಷಕ, ಸಮಾಜ ವಿಜ್ಞಾನ ಶಿಕ್ಷಕ) ವೃಂದದ ಹುದ್ದೆಗಳಿಗೆ ಮತ್ತು ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇತರಗತಿ) ಹುದ್ದೆಗಳ ಆಯ್ಕೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳು ಈ ಕೆಳಕಂಡ ಸಾಮಾನ್ಯ ಅರ್ಹತೆಗಳನ್ನು ಹೊಂದಿರತಕ್ಕದ್ದು.

ದಿನಾಂಕ :10.08.2026 ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 80 ಡಿಪಿಐ 2026 ರಲ್ಲಿ ಪ್ರಕಟಿಸಲಾದ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಶಾಲಾ ಶಿಕ್ಷಣ ಇಲಾಖೆ) (ಕೆಲವು ಬೋಧನಾ ಹುದ್ದೆಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು, 2026 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿರತಕ್ಕದ್ದು.

**i.** ಅಭ್ಯರ್ಥಿಯು ಆಯ್ಕೆ ಬಯಸಿ, ಅರ್ಜಿ ಸಲ್ಲಿಸಿದ ಶಿಕ್ಷಕ ಹುದ್ದೆಯ ನೇಮಕಾತಿಗಾಗಿ ನಡೆಯುವ **ಜಿಲ್ಲಾ ಮಟ್ಟದ** ಸ್ಪರ್ಧಾತ್ಮಕ ಪರೀಕ್ಷೆಯ ಎರಡೂ ಪತ್ರಿಕೆಗಳಿಗೆ **(02)** ಕಡ್ಡಾಯವಾಗಿ ಹಾಜರಾಗತಕ್ಕದ್ದು **ಹಾಗೂ ಪ್ರತಿ ಪತ್ರಿಕೆಯಲ್ಲಿ** ಕನಿಷ್ಠ ಶೇ.**35** ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯ**.**

**ii.** ಶಿಕ್ಷಕ**ರ** ಅರ್ಹತಾ ಪರೀಕ್ಷೆಯಲ್ಲಿ **(KARTET/CTET)**-ಪತ್ರಿಕೆ-**2**ರಲ್ಲಿ-ಸಾಮಾನ್ಯ ವರ್ಗ**,** ಪ್ರವರ್ಗ-**II(a), II(b), III(a)** ಮತ್ತು **III(b) ಗೆ** ಸೇರಿದ ಅಭ್ಯರ್ಥಿಗಳು ಶೇಕಡಾ **60** ಹಾಗೂ ಪರಿಶಿಷ್ಟ ಜಾತಿ **(**ಪ್ರವರ್ಗ-ಎ, ಬಿ **&** ಸಿ**)** ಪರಿಶಿಷ್ಟ ಪಂಗಡ**,** ಪ್ರವರ್ಗ-**1** ಮತ್ತು ವಿಕಲಚೇತನ ಗುಂಪಿಗೆ ಸೇರಿದ ಅಭ್ಯರ್ಥಿಗಳು ಶೇಕಡಾ **55 ರಷ್ಟು** ಅಂಕಗಳನ್ನು ಗಳಿಸಿ ಅರ್ಹತೆ ಹೊಂದಿರ**ಬೇಕು.**

iii. **ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) ಈ ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸುವವರಿಗೆ (KARTET/CTET)- ಮತ್ತು ಬಿ.ಇಡಿ ಪದವಿ ತೇರ್ಗಡೆ ಹೊಂದುವುದರಿಂದ ಪ್ರಸ್ತುತ ವಿನಾಯಿತಿ ನೀಡಿದೆ. ಬಿ.ಇಡಿ ಪದವಿಯನ್ನು [ಹುದ್ದೆಗೆ ಸಂಬಂಧಿಸಿದ ಬೋಧನಾ ವಿಧಾನದಲ್ಲಿ] ಹಾಗೂ KARTET / CTET(ಶಿಕ್ಷಕರ ಅರ್ಹತಾ ಪರೀಕ್ಷೆ) ಯನ್ನು ನೇಮಕಾತಿಯಾದ ದಿನಾಂಕದಿಂದ 05 ವರ್ಷಗಳೊಳಗೆ ಪೂರ್ಣಗೊಳಿಸುವುದು ಕಡ್ಡಾಯ.**

iv.

**9] ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (6 ರಿಂದ 8ನೇ ತರಗತಿ) ವೃಂದದ**

**(ಕನ್ನಡ ಭಾಷಾ ಶಿಕ್ಷಕ, ಆಂಗ್ಲ ಭಾಷಾ ಶಿಕ್ಷಕ, ಗಣಿತ ಮತ್ತು ವಿಜ್ಞಾನ ಶಿಕ್ಷಕ, ಜೀವ ವಿಜ್ಞಾನ ಶಿಕ್ಷಕ, ಸಮಾಜ ವಿಜ್ಞಾನ ಶಿಕ್ಷಕ, ಹುದ್ದೆಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಸಾಮಾನ್ಯ ವಿದ್ಯಾರ್ಹತೆಗಳು** :

(i) ವಿದ್ಯಾರ್ಹತೆ :-ಪದವಿಯಲ್ಲಿ ಕನಿಷ್ಟ ಸರಾಸರಿ **ಶೇಕಡ ಐವತ್ತು** ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ಎರಡು ವರ್ಷಗಳ ಡಿಪ್ಲೋಮಾ.

ಅಥವಾ

ಪದವಿಯಲ್ಲಿ ಕನಿಷ್ಟ ಸರಾಸರಿ **ಶೇಕಡ ಐವತ್ತು** ಅಂಕಗಳು ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿ ಅಥವಾ ವಿಶೇಷ ಶಿಕ್ಷಣದಲ್ಲಿ ಪದವಿ;

ಅಥವಾ

ಪಿಯುಸಿಯಲ್ಲಿ ಕನಿಷ್ಟ **ಶೇಕಡ ಐವತ್ತು** ಅಂಕಗಳು ಮತ್ತು ಎಲಿಮೆಂಟರಿ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಪದವಿ ಅಥವಾ ಶಿಕ್ಷಕರ ಶಿಕ್ಷಣದಲ್ಲಿ ನಾಲ್ಕು ವರ್ಷಗಳ ಪದವಿ:

**ಪರಂತು**, ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-I ಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿ ಅಥವಾ ಪಿಯುಸಿಯಲ್ಲಿ ಕನಿಷ್ಟ **ಶೇಕಡ ನಲವತ್ತೈದು** ಅಂಕಗಳನ್ನು ಪಡೆದಿರತಕ್ಕದ್ದು.

ಮತ್ತು

(ii) ಕರ್ನಾಟಕ ಸರ್ಕಾರ ಅಥವಾ ಭಾರತ ಸರ್ಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (KARTET/CTET)-ಪತ್ರಿಕೆ-2ರಲ್ಲಿ-ಸಾಮಾನ್ಯ ವರ್ಗ, ಪ್ರವರ್ಗ-II(a), II(b), III(a) ಮತ್ತು III(b) ಗೆ ಸೇರಿದ ಅಭ್ಯರ್ಥಿಗಳು ಶೇಕಡಾ 60 ಹಾಗೂ ಪರಿಶಿಷ್ಟ ಜಾತಿ (ಪ್ರವರ್ಗ-ಎ, ಬಿ & ಸಿ) ಪರಿಶಿಷ್ಟ ಪಂಗಡ, ಪ್ರವರ್ಗ-1 ಮತ್ತು ವಿಕಲಚೇತನ ಗುಂಪಿಗೆ ಸೇರಿದ ಅಭ್ಯರ್ಥಿಗಳು ಶೇಕಡಾ 55ರಷ್ಟು ಅಂಕಗಳನ್ನು ಗಳಿಸಿರಬೇಕು.

**ಪ್ರತಿ ವಿಷಯದ ಹುದ್ದೆಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ವಿದ್ಯಾರ್ಹತೆಯ ವಿವರಗಳು ಕೆಳಕಂಡಂತಿವೆ.**

**i. ಪದವೀಧರ ಪ್ರಾಥಮಿಕ ಶಿಕ್ಷಕ(6 to 8 ) (ಭಾಷೆ-ಕನ್ನಡ)**

**Graduate Primary Teacher for Class 6 to 8 (Language – Kannada)**

(a) ಅಭ್ಯರ್ಥಿಯು ಪದವಿಯಲ್ಲಿ ಕನ್ನಡ ಭಾಷೆಯ ಜೊತೆಗೆ ಆಂಗ್ಲ / ಹಿಂದಿ / ಮರಾಠಿ / ಉರ್ದು / ತೆಲುಗು / ತಮಿಳು / ಮಲಯಾಳಂ / ಕೊಂಕಣಿ / ಸಂಸ್ಕೃತ / ಇತಿಹಾಸ / ಅರ್ಥಶಾಸ್ತ್ರ / ರಾಜಕೀಯ ಶಾಸ್ತ್ರ / ಭೂಗೋಳಶಾಸ್ತ್ರ / ಸಮಾಜ ಶಾಸ್ತ್ರ ವಿಷಯಗಳಲ್ಲಿ ಯಾವುದಾದರೊಂದು ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಮೂರೂ ವರ್ಷಗಳಲ್ಲಿ ಅಭ್ಯಸಿಸಿರಬೇಕು.

(b) ಕನ್ನಡ ಭಾಷೆ ಮತ್ತು ಇತರೆ ವಿಷಯಗಳಲ್ಲಿ ಕನಿಷ್ಟ **ಶೇಕಡ ಐವತ್ತು** ಸರಾಸರಿ ಅಂಕಗಳನ್ನು ಪಡೆದಿರತಕ್ಕದ್ದು ಮತ್ತು ಸದರಿ ಭಾಷೆಯಲ್ಲಿ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.

**ii. ಪದವೀಧರ ಪ್ರಾಥಮಿಕ ಶಿಕ್ಷಕ(6 to 8) (ಭಾಷೆ- ಆಂಗ್ಲ)**

**Graduate Primary Teacher for Class 6 to 8 (Language – English)**

(a) ಅಭ್ಯರ್ಥಿಯು ಪದವಿಯಲ್ಲಿ ಆಂಗ್ಲ ಭಾಷೆಯ ಜೊತೆಗೆ ಕನ್ನಡ / ಹಿಂದಿ / ಮರಾಠಿ / ಉರ್ದು / ತೆಲುಗು / ತಮಿಳು/ ಮಲಯಾಳಂ / ಕೊಂಕಣಿ / ಸಂಸ್ಕೃತ / ಇತಿಹಾಸ / ಅರ್ಥಶಾಸ್ತ್ರ / ರಾಜಕೀಯ ಶಾಸ್ತ್ರ / ಭೂಗೋಳಶಾಸ್ತ್ರ / ಸಮಾಜ ಶಾಸ್ತ್ರ ವಿಷಯಗಳಲ್ಲಿ ಯಾವುದಾದರೊಂದು ವಿಷಯವನ್ನು ಐಚ್ಛಿಕ ವಿಷಯವನ್ನಾಗಿ ಮೂರೂ ವರ್ಷಗಳಲ್ಲಿ ಅಭ್ಯಸಿಸಿರಬೇಕು.

(b) ಆಂಗ್ಲ ಭಾಷೆ ಮತ್ತು ಇತರೆ ವಿಷಯಗಳಲ್ಲಿ ಕನಿಷ್ಟ **ಶೇಕಡ ಐವತ್ತು** ಸರಾಸರಿ ಅಂಕಗಳನ್ನು ಪಡೆದಿರತಕ್ಕದ್ದು ಮತ್ತು ಸದರಿ ಭಾಷೆಯಲ್ಲಿ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.

**iii. ಪದವೀಧರ ಪ್ರಾಥಮಿಕ ಶಿಕ್ಷಕ (6 to 8) [ಗಣಿತ ಮತ್ತು ವಿಜ್ಞಾನ]**

**Graduate Primary Teacher for class 6 to 8 (Mathematics & Science)**

(a) ಪದವಿಯಲ್ಲಿ ಗಣಿತ ವಿಷಯವನ್ನು ವ್ಯಾಸಂಗ ಮಾಡಿದ್ದು, ಕಡ್ಡಾಯವಾಗಿ ಭೌತಶಾಸ್ತ್ರವನ್ನು ಪದವಿಯ ಮೂರೂ ವರ್ಷಗಳಲ್ಲಿ ಹಾಗೂ ರಸಾಯನಶಾಸ್ತ್ರ / ಗಣಕ ವಿಜ್ಞಾನ / ಎಲೆಕ್ಟ್ರಾನಿಕ್ಸ್ / ಸಂಖ್ಯಾಶಾಸ್ತ್ರ / ಭೂಗೋಳ ಶಾಸ್ತ್ರ / ಗೃಹ ವಿಜ್ಞಾನ / ಭೂಗರ್ಭಶಾಸ್ತ್ರ / ಕಂಪ್ಯೂಟರ್ ಅಪ್ಲಿಕೇಶನ್ಸ್ ವಿಷಯಗಳಲ್ಲಿ ಒಂದು ವಿಷಯವನ್ನು ಮೂರನೇ ಐಚ್ಛಿಕ ವಿಷಯವನ್ನಾಗಿ ಕಡ್ಡಾಯವಾಗಿ ಪದವಿಯಲ್ಲಿ ಮೂರು ವರ್ಷಗಳೂ ಅಭ್ಯಾಸ ಮಾಡಿರತಕ್ಕದ್ದು.

**ಅಥವಾ**

(a) ವಾಸ್ತುಶಿಲ್ಪದ ಪದವೀಧರರಲ್ಲದ ಇಂಜನಿಯರಿಂಗ್ ಪದವೀಧರರು ಪ್ರಥಮ, ಮೂರು / ನಾಲ್ಕು ಸೆಮಿಸ್ಟರ್‌ಗಳಲ್ಲಿ ಗಣಿತ ಮತ್ತು ಉಳಿದ ಸೆಮಿಸ್ಟರ್‌ಗಳಲ್ಲಿ ಗಣಿತವನ್ನಾಧರಿಸಿದ ವಿಷಯಗಳನ್ನು ಅಭ್ಯಾಸ ಮಾಡಿರಬೇಕು.

(b)ಪದವೀಧರರಾಗಿದ್ದಲ್ಲಿ ಪದವಿಯಲ್ಲಿ **ಶೇಕಡ ಐವತ್ತು** ಸರಾಸರಿ ಅಂಕಗಳನ್ನು / ಇಂಜಿನಿಯರಿಂಗ್ ಪದವೀಧರರಾಗಿದ್ದಲ್ಲಿ ಗಣಿತ ಮತ್ತು ಅನ್ವಯಿಕ ಗಣಿತ ವಿಷಯವನ್ನು ವ್ಯಾಸಂಗ ಮಾಡಿರತಕ್ಕದ್ದು ಹಾಗೂ ಪದವಿಯಲ್ಲಿ **ಶೇಕಡ ಐವತ್ತು** ಸರಾಸರಿ ಅಂಕಗಳನ್ನು ಗಳಿಸಿರತಕ್ಕದ್ದು.

ಮತ್ತು

(c) ಸದರಿ ಮೂರು ವಿಷಯಗಳಲ್ಲಿ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.

**iv. ಪದವೀಧರ ಪ್ರಾಥಮಿಕ ಶಿಕ್ಷಕ(6 to 8) [ಜೀವವಿಜ್ಞಾನ]**

**Graduate Primary Teacher for Class 6 to 8 (Biological Science)**

[ಈ ಹುದ್ದೆಯನ್ನು ಒಂದಕ್ಕಿಂತ ಅಧಿಕ ವಿಜ್ಞಾನ ಹುದ್ದೆಗಳನ್ನು ಹೊಂದಿರುವ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಅನುಸಾರ ಎರಡನೇ ಹುದ್ದೆಯಾಗಿ ಹೊಂದಿರಬಹುದು]

ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ (ಜೀವಶಾಸ್ತ್ರ) ಹುದ್ದೆಯ (ಈ ಹುದ್ದೆಗಳು ವಿಜ್ಞಾನ ಮತ್ತು ಗಣಿತ ವಿಷಯದ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ:ಶಿಕ್ಷಕ ಅನುಪಾತದನುಸಾರ ಹುದ್ದೆ ಇರುವ ಶಾಲೆಯಲ್ಲಿ ಮಾತ್ರ ಇರುತ್ತವೆ. ಅಂತಹ ಶಾಲೆಯಲ್ಲಿನ ಮೇಲಿನ ಎರಡನೇ ಹುದ್ದೆಯು ಜೀವಶಾಸ್ತ್ರ ವಿಷಯದ ಹುದ್ದೆಯಾಗಿ ನಾಮಾಂಕನಗೊಳ್ಳುತ್ತದೆ) ಅಭ್ಯರ್ಥಿಯಾಗಿದ್ದಲ್ಲಿ,

(a) ಪದವಿಯಲ್ಲಿ ರಸಾಯನಶಾಸ್ತ್ರವನ್ನು ಕಡ್ಡಾಯವಾಗಿ ಮೂರು ವರ್ಷಗಳೂ ವ್ಯಾಸಂಗ ಮಾಡಿದ್ದು, ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ / ರೇಷ್ಮೆಕೃಷಿ / ಪರಿಸರಶಾಸ್ತ್ರ / ತಳಿಶಾಸ್ತ್ರ / ಸೂಕ್ಷ್ಮ ಜೀವ ವಿಜ್ಞಾನ ಶಾಸ್ತ್ರ / ಜೈವಿಕ ತಂತ್ರಜ್ಞಾನ / ಆಹಾರ ವಿಜ್ಞಾನ ಮತ್ತು ಪೋಷಣೆ / ಮೀನುಗಾರಿಕೆ ಮತ್ತು ಕೈಗಾರಿಕಾ ಮೀನುಗಾರಿಕೆ ವಿಜ್ಞಾನ / ಜೀವ ರಸಾಯನ ಶಾಸ್ತ್ರ / ಅಪ್ಲೈಡ್ ಕೆಮಿಸ್ಟ್ರಿ / ಗಣಿತ ವಿಷಯಗಳಲ್ಲಿ ಯಾವುದಾದರೂ ಎರಡೂ ವಿಷಯಗಳನ್ನು ಕಡ್ಡಾಯವಾಗಿ ಪದವಿಯಲ್ಲಿ ಮೂರು ವರ್ಷಗಳೂ ಅಭ್ಯಾಸ ಮಾಡಿರತಕ್ಕದ್ದು.

ಮತ್ತು

(b) ಸದರಿ ಮೂರು ವಿಷಯಗಳಲ್ಲಿ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.

**v. ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇತರಗತಿ) (ಸಮಾಜ ವಿಜ್ಞಾನ)**

**Graduate Primary Teacher for Class 6 to 8 (Social Science)**

ಪದವಿಯಲ್ಲಿ ಕೆಳಗಿನ ವಿಷಯಗಳಲ್ಲಿ ಎರಡು ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಅಭ್ಯಾಸ ಮಾಡಿರತಕ್ಕದ್ದು.

(a) ಸಮಾಜ ಪಾಠಗಳು ಸಮೂಹದ ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ / ರಾಜಕೀಯ ಶಾಸ್ತ್ರ / ಸಮಾಜಶಾಸ್ತ್ರ ಇವುಗಳಲ್ಲಿಯೇ ಎರಡು ವಿಷಯಗಳು.

ಅಥವಾ

(b) ಸಮಾಜ ಪಾಠಗಳು ಸಮೂಹದ ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ / ರಾಜಕೀಯ ಶಾಸ್ತ್ರ / ಸಮಾಜಶಾಸ್ತ್ರ / ಸಂಖ್ಯಾಶಾಸ್ತ್ರ / ಪರಿಸರ ಅಧ್ಯಯನ / ಮಾನವ ಸಂಪನ್ಮೂಲ ನಿರ್ವಹಣೆ / ವಾಣಿಜ್ಯ ಶಾಸ್ತ್ರ / ಗ್ರಾಮೀಣ ಅಭಿವೃದ್ಧಿ- ಇವುಗಳ ಪೈಕಿ ಒಂದು ವಿಷಯ ಹಾಗೂ ಭಾಷಾ ಸಮೂಹದ ಕನ್ನಡ / ಆಂಗ್ಲ / ಹಿಂದಿ / ಮರಾಠಿ/ ಉರ್ದು / ತಮಿಳು/ ತೆಲುಗು / ಕೊಂಕಣಿ / ಸಂಸ್ಕೃತ ಭಾಷೆಗಳ ಪೈಕಿ ಒಂದು ವಿಷಯ.

ಮತ್ತು

(b) ಸಮಾಜ ಪಾಠಗಳು ಸಮೂಹದ ಕನಿಷ್ಟ ಒಂದು ವಿಷಯದಲ್ಲಿಯಾದರೂ ಅಭ್ಯಾಸ ಬೋಧನೆ / ಬೋಧನಾ ವಿಧಾನವನ್ನು ಶಿಕ್ಷಕರ ಶಿಕ್ಷಣ ಡಿಪ್ಲೋಮಾ ಅಥವಾ ಪದವಿಯಲ್ಲಿ ಅಭ್ಯಾಸ ಮಾಡಿರತಕ್ಕದ್ದು.

ಮತ್ತು

(d) ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ ನಿಯಮಿಸಿರಬಹುದಾದ ಇನ್ಯಾವುದೇ ಉನ್ನತ ಅಥವಾ ಹೆಚ್ಚುವರಿ ಅರ್ಹತೆಗಳು.

ಟಿಪ್ಪಣಿ.- ಈ ನಿಯಮಗಳ ಉದ್ದೇಶಕ್ಕಾಗಿ,

(i) ನಾಲ್ಕು ವರ್ಷಗಳ ಸಂಯೋಜಿತ ಶಿಕ್ಷಕರ ಶಿಕ್ಷಣ ಪದವಿಯನ್ನು ಹೊಂದಿರುವ ಅಭ್ಯರ್ಥಿಯಾಗಿದ್ದಲ್ಲಿ, ಮೇಲಿನಂತೆ ಸಂಬಂಧಿತ ಐಚ್ಛಿಕ ವಿಷಯಗಳನ್ನು ವ್ಯಾಸಂಗ ಮಾಡಿರತಕ್ಕದ್ದು ಎಂಬುದಕ್ಕೆ ಪದವಿಯಲ್ಲಿ ಮೂರು ವರ್ಷಗಳು ಕಡ್ಡಾಯವಾಗಿ ಓದಿರಬೇಕು ಎಂಬ ನಿಯಮ ಅನ್ವಯವಾಗುವುದಿಲ್ಲ.

(ii) ಎಲಿಮೆಂಟರಿ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ) ನಿಂದ ಅಂಗೀಕೃತ ಡಿಪ್ಲೋಮಾ ಅಥವಾ ಪದವಿ.

(iii) ವಿಶೇಷ ಶಿಕ್ಷಣ ಡಿಪ್ಲೋಮಾ ಅಥವಾ ಪದವಿ ಎಂದರೆ ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ (ಆರ್.ಸಿ.ಐ.) ದಿಂದ ಅಂಗೀಕೃತ ಪದವಿ.

**vi. ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ:**

ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದ ಈ ಕೆಳಕಂಡ ಯಾವುದಾದರೊಂದು ಸ್ನಾತಕ ಪದವಿಯಲ್ಲಿ ಕನಿಷ್ಠ ಸರಾಸರಿ ಶೇಕಡ ಐವತ್ತು ಅಂಕಗಳನ್ನು ಹೊಂದಿರತಕ್ಕದ್ದು:- ಬ್ಯಾಚುಲರ್ ಆಫ್ ಸೈನ್ಸ್ (ಕಂಪ್ಯೂಟರ್ ಸೈನ್ಸ್).

**ಅಥವಾ**

ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್

**ಅಥವಾ**

ಬ್ಯಾಚುಲರ್ ಆಫ್ ಇಂಜಿನಿಯರಿಂಗ್ (ಕಂಪ್ಯೂಟರ್ ಸೈನ್ಸ್) / (ಇನ್ಫಾರ್ಮೇಷನ್ ಸೈನ್ಸ್) / (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್)

**ಅಥವಾ**

ಬ್ಯಾಚುಲರ್ ಆಫ್ ಟೆಕ್ನಾಲಜಿ (ಕಂಪ್ಯೂಟರ್ ಸೈನ್ಸ್) / (ಇನ್ಫಾರ್ಮೇಷನ್ ಸೈನ್ಸ್) / (ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್)

**ಮತ್ತು**

ಶಾಲಾ ಶಿಕ್ಷಣ ಇಲಾಖೆಯ ಗಣಕ ವಿಜ್ಞಾನ ಶಿಕ್ಷಕರಾಗಿ ನೇಮಕಾತಿ ಹೊಂದಿದಲ್ಲಿ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ.) ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ನೇಮಕಾತಿಗೊಂಡ 5 ವರ್ಷಗಳ ಒಳಗಾಗಿ ಶಿಕ್ಷಣದಲ್ಲಿ ಪದವಿ (ಬಿ.ಎಡ್.) ಅರ್ಹತೆಯನ್ನು ಗಳಿಸಿಕೊಳ್ಳತಕ್ಕದ್ದು. 5 ವರ್ಷಗಳ ಒಳಗಾಗಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಪೂರ್ಣಗೊಳಿಸತಕ್ಕದ್ದು.

ಪರಂತು, ಪರಿಶಿಷ್ಟಜಾತಿ/ಪರಿಶಿಷ್ಟವರ್ಗ/ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-I ಕ್ಕೆ ಸೇರಿದ ಅಭ್ಯರ್ಥಿಯಾಗಿದ್ದಲ್ಲಿ ಅಥವಾ ಅಂಗವೈಕಲ್ಯವುಳ್ಳ ಅಭ್ಯರ್ಥಿಯಾಗಿದ್ದಲ್ಲಿ ಪದವಿಯಲ್ಲಿ ಕನಿಷ್ಟ **ಶೇಕಡ ನಲವತ್ತೈದು** ಅಂಕಗಳನ್ನು ಪಡೆದಿರತಕ್ಕದ್ದು.

## 10] ಸಾಮಾನ್ಯ ಸೂಚನೆಗಳು:

i. ಅಭ್ಯರ್ಥಿಯ Derived Percentage ಅನ್ನು ಆಧರಿಸಿ, 1:2 ಅನುಪಾತದಲ್ಲಿ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಗೆ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

ii. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ವೃಂದದ ಹುದ್ದೆಗಳಿಗೆ ಬೇರೆ ಬೇರೆ ಜಿಲ್ಲೆ/ವಿಭಾಗದಲ್ಲಿ 1:2 ಅನುಪಾತದ ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾಗಿದ್ದಲ್ಲಿ ತಾನು ಅಂತಹ ಜಿಲ್ಲೆ/ವಿಭಾಗಗಳಲ್ಲಿ ದಾಖಲೆಗಳ ಪರಿಶೀಲನೆಗೆ ಹಾಜರಾಗತಕ್ಕದ್ದು.

iii. ಯಾವೊಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ವೃಂದಗಳ ಹುದ್ದೆಗಳ 1:1 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿದ್ದಲ್ಲಿ ಅಂತಹ ಅಭ್ಯರ್ಥಿಯು ತಾನು ಅಂತಿಮವಾಗಿ ಯಾವ ಹುದ್ದೆಗೆ ಆಯ್ಕೆಯನ್ನು ಬಯಸುತ್ತಾನೋ ಹಾಗೂ ಯಾವ ಯಾವ ವೃಂದದ ಹುದ್ದೆಯನ್ನು ತ್ಯಜಿಸಲು ಬಯಸುತ್ತಾರೋ ಅದರ ಬಗ್ಗೆ ನೋಟರೈಸ್ಡ್ ಮುಚ್ಚಳಿಕೆ ಪತ್ರ ನೀಡತಕ್ಕದ್ದು. ಈ ರೀತಿ ತ್ಯಜಿಸಿದ ವೃಂದದ ಹುದ್ದೆಯನ್ನು ಪುನಃ ಕ್ಲೇಮು ಮಾಡಲು ಅವಕಾಶವಿರುವುದಿಲ್ಲ.

iv. ಒಂದು ವೇಳೆ ಅಭ್ಯರ್ಥಿಯು ಮೇಲೆ ಸೂಚಿಸಿದಂತೆ ಒಂದು ಹುದ್ದೆಯನ್ನು ಅಂತಿಮವಾಗಿ ಆಯ್ಕೆ ಮಾಡಲು ಅಥವಾ ತ್ಯಜಿಸುವ ಬಗ್ಗೆ ನೋಟರೈಸ್ಡ್ ಮುಚ್ಚಳಿಕೆಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ವಿಫಲರಾದಲ್ಲಿ ಆತನು ಅರ್ಜಿ ಸಲ್ಲಿಸುವಾಗ ನೀಡಿರುವ ಹುದ್ದೆಗಳ ಆದ್ಯತೆಯನ್ನೇ ಅಂತಿಮ ಆದ್ಯತೆ ಎಂದು ಪರಿಗಣಿಸಿ ಮುಖ್ಯ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ಈ ನಂತರ ಯಾವುದೇ ಬದಲಾವಣೆ ಇರುವುದಿಲ್ಲ.

v. ಅಭ್ಯರ್ಥಿಯು ಅಂತಿಮವಾಗಿ ಮುಖ್ಯ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಹೊಂದಿ, ತನ್ನ ಸ್ವ- ಇಚ್ಛೆಯಿಂದ ಜಿಲ್ಲೆ/ವಿಭಾಗ ಹಾಗೂ ವೃಂದ ಮತ್ತು ಹುದ್ದೆಯನ್ನು ಆಯ್ದುಕೊಂಡು, ನೇಮಕಾತಿ ಆದೇಶ ಪಡೆದು ಕರ್ತವ್ಯಕ್ಕೆ ಹಾಜರಾಗುವ ಜಿಲ್ಲೆ/ವಿಭಾಗದ ವೃಂದ, ಹುದ್ದೆ ಮಾಧ್ಯಮಕ್ಕೆ ನಿಯಮಾನುಸಾರ ಅದೇ ಜಿಲ್ಲೆ/ವಿಭಾಗದ ಜೇಷ್ಠತೆ, ಮೀಸಲಾತಿ ಇತ್ಯಾದಿ ನಿಯಮಗಳು ಅನ್ವಯವಾಗುತ್ತವೆ.

vi. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ನಿಗದಿತ ವಿದ್ಯಾರ್ಹತೆ ಪಡೆಯಲು ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಹರಾಗುವುದಿಲ್ಲ. ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ :07/09/2026 ರೊಳಗೆ ವಿದ್ಯಾರ್ಹತೆಯ ಮೂಲ ಅಂಕಪಟ್ಟಿ ಪಡೆದಿಟ್ಟುಕೊಳ್ಳುವುದು ಕಡ್ಡಾಯ.

vii. ಅಭ್ಯರ್ಥಿಯು ನೇಮಕಾತಿಗೆ ಕ್ಲೇಮ್ ಮಾಡುವ ಮೀಸಲಾತಿಗಳ ಕುರಿತಂತೆ ಎಲ್ಲಾ ಅಗತ್ಯ ಮೀಸಲಾತಿ ಪ್ರಮಾಣ ಪತ್ರಗಳನ್ನು (ನಿಯಮಾನುಸಾರ ನಿಗದಿಪಡಿಸಿದ ನಮೂನೆಗಳಲ್ಲಿ) ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಅವುಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಚಾಲ್ತಿಯಲ್ಲಿರಬೇಕು. ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರದಲ್ಲಿ ಪಡೆದಿರುವ ಪ್ರಮಾಣ ಪತ್ರಗಳನ್ನು ಅಂತಹ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ.

viii. ಯಾವೊಬ್ಬ ಅಭ್ಯರ್ಥಿಯು ನೇಮಕಾತಿಗೆ SC / ST / Category I / II(a) / II(b) / III(a) / III(b) ಮತ್ತು ಸಮತಳ ಮೀಸಲಾತಿ ಕೋರಿದ್ದು, ಆತನು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ಅರ್ಹತೆಯಲ್ಲಿ ಆಯ್ಕೆಯಾಗಿದ್ದರೂ ಸಹ, ಮೀಸಲಾತಿ ಕೋರಿದ ಜಾತಿ ಮತ್ತು ಆದಾಯ ಹಾಗೂ ಸಮತಳ ಮೀಸಲಾತಿ ಪ್ರಮಾಣ ಪತ್ರಗಳ ಸಿಂಧುತ್ವ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಸಿಂಧುತ್ವ ರದ್ದಾದಲ್ಲಿ ಅಥವಾ ಬಾರದಿದ್ದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು ರದ್ದುಗೊಳಿಸಲಾಗುವುದು.

**11] ಮೆರಿಟ್ ನಿರ್ಧರಿಸುವ ವಿಧಾನ:**

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8 ನೇ ತರಗತಿ) ಮತ್ತು ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8 ನೇ ತರಗತಿ) ಹುದ್ದೆಗಳಿಗೆ ಆಯ್ಕೆ ಮಾಡಲು ಆಯಾ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಪ್ರತ್ಯೇಕ ಅರ್ಹತಾ ಪಟ್ಟಿಗಳನ್ನು ಸಿದ್ಧಪಡಿಸಲಾಗುವುದು. ಆಯ್ಕೆ ಪ್ರಾಧಿಕಾರವು ಅಧಿಸೂಚನೆ ಮಾಡಲಾದ ಆಯಾ ವಿಷಯವಾರು, ಮಾಧ್ಯಮವಾರು ಮತ್ತು ವರ್ಗವಾರು ಹುದ್ದೆಗಳಿಗೆ ನಿಗದಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಪದವಿ ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳನ್ನು ಅನುಪಾತದ ನಿಗದಿತ ಮಾದರಿಯ weightage ಅನುಸರಿಸಿ (Derived percentage) ಲೆಕ್ಕಹಾಕಿದ ಶೇಕಡವಾರು ಆಧಾರದ ಮೇಲೆ ಆಯ್ಕೆಗೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

1) **ಕನ್ನಡ ಭಾಷಾ ಶಿಕ್ಷಕ, ಆಂಗ್ಲಭಾಷಾ ಶಿಕ್ಷಕ, ಗಣಿತ ಮತ್ತು ವಿಜ್ಞಾನ ಶಿಕ್ಷಕ, ಜೀವ ವಿಜ್ಞಾನ ಶಿಕ್ಷಕ, ಸಮಾಜ ವಿಜ್ಞಾನ ಶಿಕ್ಷಕ (6-8ನೇ ತರಗತಿ) ವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ:-**

(a) ಸದರಿ ಹುದ್ದೆಗಳಿಗೆ ಸಂಬಂಧಿಸಿದಂತೆ ಆಯ್ಕೆ ಪ್ರಾಧಿಕಾರವು ಅಧಿಸೂಚಿಸಲಾದ ಆಯಾ ವಿಷಯವಾರು ಮತ್ತು ವರ್ಗವಾರು ಹುದ್ದೆಗಳಿಗೆ ನಿಗದಿಪಡಿಸಿದ ಸ್ಪರ್ಧಾತ್ಮಕ ಪರೀಕ್ಷೆ, ಶಿಕ್ಷಕರ ಅರ್ಹತಾ ಪರೀಕ್ಷೆ, ಪದವಿ ಮತ್ತು ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳನ್ನು ಆಧರಿಸಿದ ಅನುಪಾತದ ನಿಗದಿತ ಮಾದರಿಯ weightage ಅನುಸರಿಸಿ (Derived percentage) ಲೆಕ್ಕಹಾಕಿದ ಶೇಕಡವಾರು ಆಧಾರದ ಮೇಲೆ, ಆಯ್ಕೆಗೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

(b) ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೊಮಾ (D.Ed,D.El.Ed), ಬಿ.ಇಡಿ ಪದವಿ, ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ಅಥವಾ ಬಿ.ಇಡಿ (ವಿಶೇಷ ಶಿಕ್ಷಣ) ಹೊಂದಿರುವ ಅಭ್ಯರ್ಥಿಗಳ ಪ್ರಕರಣದಲ್ಲಿ ಆ ಅಭ್ಯರ್ಥಿಯ (Derived percentage) ಶೇಕಡವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ಅನ್ನು ಅನ್ವಯಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ:

| ಕ್ರ.ಸ | ವಿವರ | Weightage |
|---|---|---|
| 1 | ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET) | 70% |
| 2 | ಟಿ.ಇಟಿ ಪರೀಕ್ಷೆಯಲ್ಲಿ ಪಡೆದ ಅಂಕಗಳು (KARTET/CTET-ಪತ್ರಿಕೆ-02) | 20% |
| 3 | ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳು | 08% |
| 4 | ಶಿಕ್ಷಕರ ಶಿಕ್ಷಣ ಕೋರ್ಸ್‌ನಲ್ಲಿ ಪಡೆದ ಅಂಕಗಳು | 02% |

(c) ನಾಲ್ಕು ವರ್ಷಗಳ ಶಿಕ್ಷಕರ ಶಿಕ್ಷಣ ಪದವಿ ಹೊಂದಿರುವ ಅಭ್ಯರ್ಥಿಯ ಪ್ರಕರಣದಲ್ಲಿ ಆ ಅಭ್ಯರ್ಥಿಯ (Derived percentage) ಶೇಕಡವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ಅನ್ನು ಅನ್ವಯಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ:

| ಕ್ರ.ಸ | ವಿವರ | Weightage |
|---|---|---|
| 1 | ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET) | 70% |
| 2 | ಟಿ.ಇ.ಟಿ ಪರೀಕ್ಷೆಯಲ್ಲಿ ಪಡೆದ ಅಂಕಗಳು (KARTET/CTET-ಪತ್ರಿಕೆ-02) | 20% |
| 3 | ನಾಲ್ಕು ವರ್ಷಗಳ ಬಿ.ಎಲ್.ಇಡಿ ಅಥವಾ ಬಿಎ/ಬಿಎಸ್ಸಿಇಡಿ ಅಥವಾ ಬಿಎ.ಇಡಿ ಅಥವಾ ಬಿಎಸ್ಸಿಇಡಿ. ಪದವಿಯಲ್ಲಿ / ಬಿ.ಇಡಿ – ಎಂ.ಇಡಿ ಸಂಯೋಜಿತ ಪದವಿಯಲ್ಲಿ ಪಡೆದ ಅಂಕಗಳ | 10% |

(d) **ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) ವೃಂದದ ಹುದ್ದೆಗಳಿಗೆ ಸಂಬಂಧಿಸಿದಂತೆ,:** ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8 ನೇ ತರಗತಿ) ಹುದ್ದೆಗೆ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳ ಪ್ರತ್ಯೇಕ ಅರ್ಹತಾ ಪಟ್ಟಿಯನ್ನು ಈ ಕೆಳಕಂಡಂತೆ ಸಿದ್ಧಪಡಿಸಲಾಗುವುದು. ಗಣಕ ವಿಜ್ಞಾನ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯ ಪ್ರಕರಣದಲ್ಲಿ ಆ ಅಭ್ಯರ್ಥಿಯ (Derived percentage) ಶೇಕಡವಾರು ಅಂಕಗಳ ಪ್ರಮಾಣವನ್ನು ಈ ಕೆಳಗಿನ weightage ನ್ನು ಅನ್ವಯಿಸುವ ಮೂಲಕ ಲೆಕ್ಕ ಹಾಕಲಾಗುತ್ತದೆ:

| ಕ್ರ.ಸ | ವಿವರ | Weightage |
|---|---|---|
| 1 | ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳು (CET) | 85% |
| 2 | ನಿಗದಿಪಡಿಸಿದ ಪದವಿಯಲ್ಲಿ ಪಡೆದ ಅಂಕಗಳು | 15% |

**ಸೂಚನೆ** : ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8) ಮತ್ತು ಗಣಕ ವಿಜ್ಞಾನ ಶಿಕ್ಷಕರು (1 ರಿಂದ 8ನೇ ತರಗತಿ) ವೃಂದದ ಹುದ್ದೆಗಳಿಗೆ ಮೇಲೆ ವಿವರಿಸಿದಂತೆ Weightage ಲೆಕ್ಕ ಹಾಕಿದಾಗ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನವಾದ (Derived Percentage) ಅಂಕಗಳನ್ನು ಪಡೆದಲ್ಲಿ ವಯಸ್ಸನ್ನು ಆಧರಿಸಿ, ವಯಸ್ಸಿನಲ್ಲಿ ಹಿರಿಯರಾದವರನ್ನು ಮೆರಿಟ್ ಪಟ್ಟಿಯಲ್ಲಿ ವಯಸ್ಸಿನಲ್ಲಿ ಕಿರಿಯರಿಗಿಂತ ಮೊದಲು ಪರಿಗಣಿಸಲಾಗುವುದು.

**12] ಮೀಸಲಾತಿ:**

ನೇರ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಗದಿಪಡಿಸಿದ ಜಾರಿಯಲ್ಲಿರುವ ನೇರ ಮೀಸಲಾತಿ (Vertical reservation) ಮತ್ತು ಸಮತಳ ಮೀಸಲಾತಿ (Horizontal reservation) ನೀತಿಯು ಪ್ರಸ್ತುತ ನೇಮಕಾತಿಗೆ ಅನ್ವಯವಾಗುತ್ತದೆ.

**(A) ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:**

ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು.

| | | |
|---|---|---|
| 01 | ಪರಿಶಿಷ್ಟ ಜಾತಿ (ಪ್ರವರ್ಗ ಎ, ಬಿ ಮತ್ತು ಸಿ) ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ-ಡಿ |
| 02 | ಪ್ರವರ್ಗ -1ಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ-ಇ |
| 03 | ಪ್ರವರ್ಗ- II(a), II(b), III(a) ಮತ್ತು III(b) ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು | ನಮೂನೆ-ಎಫ್ |
| 04 | ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳ ಸ್ಥಳೀಯ ವೃಂದ (80%) ನೇಮಕಾತಿಯಲ್ಲಿ ಮೀಸಲಾತಿ ಪಡೆಯ ಬಯಸುವ ಅಭ್ಯರ್ಥಿಗಳು ಹಾಗೂ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಬಿ.ಬಿ.ಎಂ.ಪಿ ಪ್ರದೇಶದ (ಶೇ.8%) ಹುದ್ದೆಗಳಿಗೆ ಮಾತ್ರ | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 43 ಹೆಚ್‌ಕೆಸಿ 2013 ದಿನಾಂಕ :29-01-2014ರಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರಬೇಕು (ಕಲ್ಯಾಣ ಕರ್ನಾಟಕ ಪ್ರದೇಶ ಮತ್ತು ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಗೆ (ಬಿ.ಬಿ.ಎಂ.ಪಿ ಪ್ರದೇಶ) ಮಾತ್ರ. |

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಅಭ್ಯರ್ಥಿಯು ಪಡೆದಿರತಕ್ಕದ್ದು. ಅಭ್ಯರ್ಥಿಗಳು ಪಡೆದಿರುವ ಪ್ರಮಾಣ ಪತ್ರವು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ, ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಅಭ್ಯರ್ಥಿಗಳು ನಿಗದಿಪಡಿಸಿರುವ ನಿಗದಿತ ನಮೂನೆಯಲ್ಲಿಯೇ ಸಂಬಂಧಿಸಿದ ವ್ಯಾಪ್ತಿಯ ತಹಶೀಲ್ದಾರರ ದರ್ಜೆಗಿಂತ ಕಡಿಮೆ ಇಲ್ಲದ ರೆವಿನ್ಯೂ ಪ್ರಾಧಿಕಾರಿಯಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು. ಸದರಿ ಪ್ರಮಾಣ ಪತ್ರಗಳಲ್ಲಿ RD ಸಂಖ್ಯೆಯ ನಮೂದು ಇರುವುದು ಕಡ್ಡಾಯ. ಈ ನಮೂನೆಗಳನ್ನು ಹೊರತುಪಡಿಸಿ, ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು. ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರವಿರಬೇಕು ಮತ್ತು ಅವಧಿ ಮೀರಿದ ಮೀಸಲಾತಿ ಪ್ರಮಾಣ ಪತ್ರವನ್ನು ತಿರಸ್ಕರಿಸಲಾಗುವುದು.

**ವಿಶೇಷ ಸೂಚನೆ :**

(a) ಸರ್ಕಾರದ ಆದೇಶ ಸಂಖ್ಯೆ: ಸಕಇ 179 ಬಿಸಿಎ 2010 ದಿನಾಂಕ:16.07.2011 ರನ್ವಯ ಬಲಿಜ ಮತ್ತು ಉಪಜಾತಿಗಳಾದ ಬಲಜಿಗ/ಬಣಜಿಗ/ ಗೌಡ ಬಣಜಿಗ, ನಾಯ್ಡು, ತೆಲುಗ ಬಲಿಜ/ತೆಲಗ ಬಣಜಿಗ/ಶೆಟ್ಟಿ ಬಲಿಜ, ಶೆಟ್ಟಿ ಬಣಜಿಗ/ಬಣಜಿಗ ಶೆಟ್ಟಿ, ದಾಸರ ಬಲಿಜ / ದಾಸರ ಬಲಜಿಗ / ದಾಸರ ಬಣಜಿಗ/ದಾಸ ಬಣಜಿಗ, ಕಸ್ಬನ್ , ಮುನ್ನೂರ / ಮುನ್ನಾರ್ / ಮುನ್ನೂರ್‌ಕಾಪು, ಬಳಿಗಾರ / ಬಳೆಬಣಜಿಗ / ಬಳೆಬಲಜಿಗ/ ಬಳಿ ಶೆಟ್ಟಿ / ಬಣಗಾರ, ರೆಡ್ಡಿ (ಬಲಿಜ), ಜನಪ್ಪನ್, ಉಪ್ಪಾರ (ಬಲಿಜ), ತುಲೇರು (ಬಲಿಜ). ಜನಾಂಗವನ್ನು/ ಉಪಜಾತಿಗಳನ್ನು, ಸಂವಿಧಾನದ ಅನುಚ್ಛೇದ 15(4)ರನ್ವಯ ಶಿಕ್ಷಣದ ಸಲುವಾಗಿ 2ಎ ಮೀಸಲಾತಿಯಡಿ ಹಾಗೂ ಸಂವಿಧಾನದ ಅನುಚ್ಛೇದ 16(4)ರನ್ವಯ ಉದ್ಯೋಗದ ಸಲುವಾಗಿ 3ಎ ಮೀಸಲಾತಿಯಡಿ ಪರಿಗಣಿಸಲಾಗಿದೆ. ಆದ್ದರಿಂದ **ಸದರಿ ಆದೇಶಾನುಸಾರ ಸದರಿ ಜಾತಿ/ಉಪಜಾತಿಯ ಅಭ್ಯರ್ಥಿಗಳು ಉದ್ಯೋಗದಲ್ಲಿನ ಮೀಸಲಾತಿಗಾಗಿ ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ III(a) ಮೀಸಲಾತಿ ಕೋರತಕ್ಕದ್ದು ಹಾಗೂ ಶಿಕ್ಷಣದ ಸಲುವಾಗಿ ಪಡೆದ II(a) ಮೀಸಲಾತಿ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.**

(b) ಉದ್ಯೋಗದ ಸಲುವಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು (ಶಿಕ್ಷಣ ಅಥವಾ ಇತರೆ ಸೌಲಭ್ಯಗಳಿಗೆ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ). ನೇಮಕಾತಿಗೆ ಮೀಸಲಾತಿ ಕೋರಿ ಜಾತಿ ಮತ್ತು ಆದಾಯದ ಪ್ರಮಾಣ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳು (ಆಯ್ಕೆಪಟ್ಟಿಯಲ್ಲಿ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದವರೂ ಸೇರಿದಂತೆ) ಸಿಂಧುತ್ವ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

(c) **ವಿವಿಧ ಮೀಸಲಾತಿ ವರ್ಗಕ್ಕೆ ಸೇರಿದ ಮೀಸಲಾತಿ ಸ್ಥಾನಗಳನ್ನು ಆಯ್ಕೆಗೆ ಮೊದಲೇ ನಿರ್ಧರಿಸಿ**, **ಆಯಾ ವರ್ಗಗಳಿಗೆ ಮೀಸಲಿರಿಸಿದೆ**. **ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಮೀಸಲಾತಿ ಸ್ಥಾನಗಳಿಗೆ ಆಯ್ಕೆ ಮಾಡಬೇಕಾಗಿರುವುದರಿಂದ ಅಭ್ಯರ್ಥಿಗಳು ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆಯಲ್ಲಿಯೇ ಸಲ್ಲಿಸುವುದು ಅತ್ಯವಶ್ಯ**. **ಆದುದರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ತರುವಾಯ ಯಾವುದೇ ಕಾರಣದಿಂದಲೂ ಅಭ್ಯರ್ಥಿಗಳು ಸಲ್ಲಿಸುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಅಂಗೀಕರಿಸಲಾಗುವುದಿಲ್ಲ**.

**(B) ಸಾಮಾನ್ಯ ಅರ್ಹತೆ ಸೇರಿದಂತೆ ಪ್ರತಿ ಮೀಸಲಾತಿ ಪ್ರವರ್ಗಗಳಿಗೆ ಈ ಕೆಳಕಂಡ ಆದೇಶಗಳ ಪ್ರಕಾರ. ಸಮತಳ ಮೀಸಲಾತಿ [HORIZONTAL RESERVATION] ಅನ್ವಯ ಹುದ್ದೆಗಳ ಮೀಸಲಾತಿ ವಿವರ**

| | | | |
|---|---|---|---|
| **1** | ಮಾಜಿ ಸೈನಿಕರಿಗೆ | ಶೇಕಡಾ-10 | ಕರ್ನಾಟಕ ಸಿವಿಲ್ ಸರ್ವೀಸಸ್ [ಜನರಲ್ ರಿಕ್ರೂಟ್‌ಮೆಂಟ್] ರೂಲ್ಸ್ 1977 ನಿಯಮ-9 ರ ಉಪ ನಿಯಮ (1) ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೆಹಿಮ 2023 ದಿನಾಂಕ:08.03.2023. |
| **2** | ವಿಶೇಷ ಚೇತನರಿಗೆ | ಶೇಕಡಾ-5 | ಕರ್ನಾಟಕ ಸಿವಿಲ್ ಸರ್ವೀಸಸ್ [ಜನರಲ್ ರೆಕ್ರೂಟ್‌ಮೆಂಟ್] ರೂಲ್ಸ್ 1977 ನಿಯಮ-9 ರ ಉಪನಿಯಮ (1ಎ) ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೆಹಿಮ 2023 ದಿನಾಂಕ:08.03.2023. |
| **3** | ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ | ಶೇಕಡಾ-5 | ಕರ್ನಾಟಕ ಸಿವಿಲ್ ಸರ್ವೀಸಸ್ [ಜನರಲ್ ರೆಕ್ರೂಟ್‌ಮೆಂಟ್] ರೂಲ್ಸ್ 1977 ನಿಯಮ-9 ರ ಉಪನಿಯಮ (1ಎಎ) ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೆಹಿಮ 2023 ದಿನಾಂಕ:08.03.2023. |
| **4** | ಗ್ರಾಮೀಣ ಅಭ್ಯರ್ಥಿಗಳಿಗೆ | ಶೇಕಡಾ-25 | ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ [ರಾಜ್ಯ ಸಿವಿಲ್ ಸೇವೆಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ] 2000 ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೆಹಿಮ 2023 ದಿನಾಂಕ:08.03.2023. |
| **5** | ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ | ಶೇಕಡಾ-5 | ಕರ್ನಾಟಕ ಸಿವಿಲ್ ಸರ್ವೀಸಸ್ [ ಜನರಲ್ ರೆಕ್ರೂಟ್‌ಮೆಂಟ್] ರೂಲ್ಸ್ 1977 ರ ನಿಯಮಗಳ ನಿಯಮ 9 ರ ಉಪನಿಯಮ (1ಸಿ) ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2023 ದಿ:08.03.2023 |
| **6** | ಮಹಿಳಾ ಅಭ್ಯರ್ಥಿಗಳಿಗೆ | ಶೇಕಡಾ-33 | ಕರ್ನಾಟಕ ಸಿವಿಲ್ ಸರ್ವೀಸಸ್ [ ಜನರಲ್ ರೆಕ್ರೂಟ್‌ಮೆಂಟ್] ರೂಲ್ಸ್ 1977 ನಿಯಮ-9 ರ ಉಪನಿಯಮ (1ಬಿ) ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2023 ದಿ:08.03.2023 |
| **7** | ತೃತೀಯ ಲಿಂಗ ಗುಂಪಿಗೆ ಸೇರಿದ ಅಭ್ಯರ್ಥಿಗಳಿಗೆ | ಶೇಕಡಾ-1 | ಕರ್ನಾಟಕ ಸಿವಿಲ್ ಸರ್ವೀಸಸ್ [ ಜನರಲ್ ರೆಕ್ರೂಟ್‌ಮೆಂಟ್] ರೂಲ್ಸ್ 1977 ನಿಯಮ-9 ರ ಉಪನಿಯಮ (1ಡಿ) ಹಾಗೂ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಹಿಮ 2023 ದಿ:08.03.2023 |

**(C) ಮಾಜಿ ಸೈನಿಕ ಅಭ್ಯರ್ಥಿಗಳು:**

ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 13 ಎಸ್.ಆರ್.ಆರ್. 92 ದಿನಾಂಕ:01-04-1992 ಮತ್ತು ಅಧಿಸೂಚನೆ ಸಂಖ್ಯೆ : ಡಿಪಿಎಆರ್ 28 ಎಸ್.ಆರ್.ಆರ್. 95 ದಿನಾಂಕ:21-10-1995 ರನ್ವಯ ನೇರ ನೇಮಕಾತಿಗಳಲ್ಲಿ ಮಾಜಿ ಸೈನಿಕರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು,1977 ರಲ್ಲಿದ್ದಂತೆ ಮಾಜಿ ಸೈನಿಕರ ವಿವರ ಕೆಳಕಂಡಂತಿದೆ.

i. ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್‌ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ. ಸೇರ್ಪಡೆ ಆಗುವುದಿಲ್ಲ.

ii. ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

(a) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

**ಅಥವಾ**

(b) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

(c) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

**ಅಥವಾ**

(d) ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು
2. ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆಯಿಂದ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು

**ವಿವರಣೆ:**-ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ನಿರ್ದಿಷ್ಟ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ. ಇಂತಹವರು ಅರ್ಜಿ ಸಲ್ಲಿಸುವ ಮುನ್ನ ತಮ್ಮ ಮೇಲಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಬೇಕು. ಸೇವೆಯಿಂದ ಬಿಡುಗಡೆಯಾದ ವ್ಯಕ್ತಿಗಳು ಅವರ ಬಿಡುಗಡೆ ಪ್ರಮಾಣ ಪತ್ರವನ್ನು/ ಮಾಜಿ ಸೈನಿಕರ ಅವಲಂಬಿತರು- ಮಾಜಿ ಸೈನಿಕರು ಸೇವೆಯಲ್ಲಿದ್ದಾಗ ಕೊಲ್ಲಲ್ಪಟ್ಟಿರುವ/ಶಾಶ್ವತವಾಗಿ ಅಂಗವಿಕಲರಾದ ಬಗ್ಗೆ ಪ್ರಮಾಣ ಪತ್ರವನ್ನು ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೆ ಹಾಜರುಪಡಿಸಬೇಕು.

**ವಿಶೇಷ ಸೂಚನೆ:** ಯಾವೊಬ್ಬ ಅಭ್ಯರ್ಥಿಯು ಮಾಜಿ ಸೈನಿಕ ಮೀಸಲಾತಿಯನ್ನು ಕೋರಿ, ಸದರಿ ಮೀಸಲಾತಿಯಡಿ ಆಯ್ಕೆಯಾಗುವ ಅಭ್ಯರ್ಥಿಯ ಮಾಜಿ ಸೈನಿಕ ಮೀಸಲಾತಿ ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹವರ ಆಯ್ಕೆಗುಂಪು GM_OT/GM_WM/GM_RURAL/ GM_KAN/ GM_YN/ GM_TRANS GENDER ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ. ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/GM_RURAL/ GM_KAN /GM_YN/GM_TRANS GENDER ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್‌ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಆಯ್ಕೆಯಾದಲ್ಲಿ ಮಾಜಿ ಸೈನಿಕ ಮೀಸಲಾತಿಅಭ್ಯರ್ಥಿಯ ಮೀಸಲಾತಿಯ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/GM_WM/ GM_RURAL/GM_KAN /GM_YN/GM_TRANS GENDER ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

**(D)ಗ್ರಾಮೀಣ ಅಭ್ಯರ್ಥಿ:**

**i.** ಸರ್ಕಾರದ ಅಧಿಸೂಚನೆ ಸಂಖ್ಯೆ:59 ಶಾಸನ 2000, ದಿನಾಂಕ: 06.01.2001 ರನ್ವಯ ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ **ಸಾಮಾನ್ಯ ಅರ್ಹತೆಯ (GM) ಅಭ್ಯರ್ಥಿಗಳು** ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸೆನಿನಿ 2001 ದಿನಾಂಕ:13.02.2001 ರನ್ವಯ ನಮೂನೆ-2ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಮೊಹರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಪಡೆದಿರತಕ್ಕದ್ದು. ಇದರೊಂದಿಗೆ ಸದರಿ ಅಭ್ಯರ್ಥಿಯು ಮೇಲುಸ್ತರಕ್ಕೆ [Creamy layer] ಸೇರಿಲ್ಲದಿರುವ ಬಗ್ಗೆ ನಮೂನೆ-1ರಲ್ಲಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಂಬಂಧಿಸಿದ ತಹಶೀಲ್ದಾರ್ ರವರಿಂದ ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು ಹಾಗೂ ಚಾಲ್ತಿಯಲ್ಲಿರಬೇಕು.

**ii.** ಗ್ರಾಮೀಣ ಮೀಸಲಾತಿ ಕೋರಿದ ಸಾಮಾನ್ಯ ವರ್ಗದ ಅಭ್ಯರ್ಥಿಯು (GM_Rural Candidate) ಉತ್ತಮ ಮೆರಿಟ್ ನೊಂದಿಗೆ ಸಾಮಾನ್ಯ_ಗ್ರಾಮೀಣ (GM_Rural) ಮೀಸಲಾತಿಯಲ್ಲಿ ಆಯ್ಕೆಯಾದಲ್ಲಿ ಗ್ರಾಮೀಣ ಮೀಸಲಾತಿಯ

ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹ ಅಭ್ಯರ್ಥಿಯು ಮುಖ್ಯ ಆಯ್ಕೆಪಟ್ಟಿಯಲ್ಲಿ GM_OT/GM_WM/ GM_Kan/ GM_Ex Service Men/GM_YN/GM_Trans Gender ಕಟ್ ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ, ಈಗಾಗಲೇ ಆಯ್ಕೆಯಾಗಿರುವ ಆಯ್ಕೆ ಗುಂಪು GM_OT/GM_WM/GM_Kan/ GM_Ex Service Men/GM_YN/GM_Trans Gender ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

**iii.** ಅಂತೆಯೇ ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಪ್ರವರ್ಗ -1, 2ಎ, 2ಬಿ, 3ಎ, 3ಬಿ, ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ತಮ್ಮ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಸೆನೆನಿ 2005, ದಿನಾಂಕ:10.08.2005 ರಲ್ಲಿ ನೀಡಿರುವ ನಿಗದಿತ ನಮೂನೆ-2 ರಲ್ಲಿ ಕಡ್ಡಾಯವಾಗಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಮೊಹರು, ಪ್ರಮಾಣ ಪತ್ರ ವಿತರಿಸಿದ ದಿನಾಂಕ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೊಹರಿನೊಂದಿಗೆ ಮೇಲು ಸಹಿ ಮತ್ತು ದಿನಾಂಕದೊಂದಿಗೆ ಪಡೆದಿರತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ. ಅಂತೆಯೇ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರದ ನೈಜತೆ ತಿರಸ್ಕೃತಗೊಂಡಲ್ಲಿ ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.

**ವಿಶೇಷ ಸೂಚನೆ:** ಜಾತಿ ಮೀಸಲಾತಿ ಹಾಗೂ ಗ್ರಾಮೀಣ ಮೀಸಲಾತಿ ಕೋರಿರುವ ಅಭ್ಯರ್ಥಿಗಳ ಜಾತಿ ಮತ್ತು ಆದಾಯದ ಸಿಂಧುತ್ವವು ತಿರಸ್ಕೃತಗೊಂಡಲ್ಲಿ / ಅಸಿಂಧುವಾದಲ್ಲಿ,/ ಸಿಂಧುತ್ವ ಪ್ರಮಾಣ ಪತ್ರ ವರದಿ ಬಾರದೇ ಇದ್ದಲ್ಲಿ / ಸಲ್ಲಿಸದೇ ಇದ್ದಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೂ ಸಹ ಅನರ್ಹರಾಗುತ್ತಾರೆ. ಆಯ್ಕೆ ಪ್ರಕ್ರಿಯೆಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಅಭ್ಯರ್ಥಿಗಳು ಸಾಮಾನ್ಯ_ಗ್ರಾಮೀಣ ಮೀಸಲಾತಿಯಡಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಕೆನೆಪದರ ನೀತಿ (Creamy Layer Policy) ಅನ್ವಯವಾಗುವುದರಿಂದ ಅವರುಗಳ ಜಾತಿ ಮತ್ತು ಆದಾಯದ ಸಿಂಧುತ್ವ ಪ್ರಮಾಣ ಪತ್ರ ಮತ್ತು ಗ್ರಾಮೀಣ ಅಭ್ಯರ್ಥಿ ಮೀಸಲಾತಿ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲನೆ ಮಾಡದೇ ಅಂತಹ ಅಭ್ಯರ್ಥಿಗಳಿಗೆ ನೇಮಕಾತಿ ನಿಯಮಗಳು 1977ರ ನಿಯಮ 10 ರನ್ವಯ ನೇಮಕಾತಿ ಆದೇಶವನ್ನು ನೀಡಲು ಅವಕಾಶವಿರುವುದಿಲ್ಲ.

ಗ್ರಾಮೀಣ ಮೀಸಲಾತಿ ಕೋರಿದ ಯಾವುದೇ ವರ್ಗದ ಅಭ್ಯರ್ಥಿಯು ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/GM_Kan/ GM_Ex Service Men/GM_YN/ GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್‌ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಗ್ರಾಮೀಣ ಮೀಸಲಾತಿಯಲ್ಲಿ ಆಯ್ಕೆಯಾದಲ್ಲಿ ಗ್ರಾಮೀಣ ಮೀಸಲಾತಿಯ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/ GM_WM/ GM_Kan / GM_Ex Service Men / GM_YN/ GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

## (E) ಕನ್ನಡ ಮಾಧ್ಯಮದ ಅಭ್ಯರ್ಥಿ (ಕ.ಮಾ.ಅ)

i. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 71 ಸೆನೆನಿ 2001 ದಿನಾಂಕ:24.10.2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು 1ನೇ ತರಗತಿಯಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಮೊಹರು, ಪ್ರಮಾಣ ಪತ್ರ ವಿತರಿಸಿದ ದಿನಾಂಕ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೊಹರಿನೊಂದಿಗೆ ಮೇಲು ಸಹಿ ಮತ್ತು ದಿನಾಂಕದೊಂದಿಗೆ ಪಡೆದಿರತಕ್ಕದ್ದು. ಸದರಿ ಪ್ರಮಾಣ ಪತ್ರವು ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು ಹಾಗೂ ಮೂಲದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಮೂಲ ದಾಖಲೆಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸಬೇಕು.

ii. ಕನ್ನಡ ಮಾಧ್ಯಮ ಮೀಸಲಾತಿಯನ್ನು ಕೋರಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸದರಿ ಮೀಸಲಾತಿಯಡಿ ಆಯ್ಕೆಯಾಗುವ ಅಭ್ಯರ್ಥಿಯ ಕನ್ನಡ ಮಾಧ್ಯಮದ ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹವರ ಆಯ್ಕೆಗುಂಪು GM_OT/GM_WM/GM_Rural/GM_Ex Service Men/GM_YN/GM_Trans Gender ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ. ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/GM_Rural/ GM_Ex Service Men/GM_YN/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್‌ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಆಯ್ಕೆಯಾದಲ್ಲಿ ಕನ್ನಡ ಮಾಧ್ಯಮ ಅಭ್ಯರ್ಥಿಯ ಮೀಸಲಾತಿಯ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/GM_WM/GM_Rural/ GM_Ex Service Men/GM_YN/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

**(F) ಅಂಗವೈಕಲ್ಯತೆಯುಳ್ಳ ಅಭ್ಯರ್ಥಿಗಳಿಗೆ:**

**i.** ಸರ್ಕಾರದ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 149 ಎಸ್‌ಆರ್‌ಆರ್ 2020 ದಿನಾಂಕ:25/09/2020 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ ಗ್ರೂಪ್-'ಸಿ' ಹುದ್ದೆಗಳಿಗೆ ಶೇಕಡಾ 5ರಷ್ಟು ಅಂಗವೈಕಲ್ಯತೆಯುಳ್ಳ ಅಭ್ಯರ್ಥಿಗಳಿಗೆ ಸಮತಲ ಮೀಸಲಾತಿಯನ್ನು ಕಲ್ಪಿಸಿದ್ದು, ಇದರನ್ವಯ **ಶೇಕಡಾ 40 ಕ್ಕಿಂತ** ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. **ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ: 19/11/2005 ರಲ್ಲಿ** ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ **ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್‌ಪಿ 2010 ದಿನಾಂಕ:21-09-2011ರಂತೆ,** ಅಂಗವಿಕಲತೆವಾರು ನಿಗದಿಪಡಿಸಿರುವ ಪ್ರಾಧಿಕಾರಗಳಿಂದ (ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ) ಪಡೆದ ಪ್ರಮಾಣ ಪತ್ರ / UDID Card ಅನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರವನ್ನು ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ.

**ii.** ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 272 ಸೇನೆನಿ2013 ದಿನಾಂಕ:11/02/2021 ರನ್ವಯ " ಎದ್ದು ಕಾಣುವ ಅಂಗವಿಕಲತೆ " (Benchmark Disabilities) ಅಥವಾ ನಿರ್ದಿಷ್ಟಪಡಿಸಿದ ಅಂಗವಿಕಲತೆಗೆ (Specified Disabilities) ಸಂಬಂಧಿಸಿದ ಮೀಸಲಾತಿಯನ್ನು ಕೋರಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ವೈದ್ಯಕೀಯ ಮಂಡಳಿಯಿಂದ ಅನುಬಂಧ-1 ರಲ್ಲಿ ಪಡೆದ ಪ್ರಮಾಣ ಪತ್ರವನ್ನು ಅಪ್ ಲೋಡ್ ಮಾಡತಕ್ಕದ್ದು, ಹಾಗೂ ಇತರೆ ಎದ್ದು ಕಾಣುವ ಅಂಗವಿಕಲತೆಯನ್ನು ಹೊಂದಿರುವ ಅಭ್ಯರ್ಥಿಗಳು ಪರೀಕ್ಷೆಯನ್ನು ಬರೆಯಲು ಲಿಪಿಕಾರರ ಸಹಾಯ ಬೇಕಿದ್ದಲ್ಲಿ ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ಅನುಬಂಧ-2 ರಲ್ಲಿ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ನಿಗದಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ಸದರಿ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಪ್ರತಿ ಒಂದು ಗಂಟೆಯ ಪರೀಕ್ಷೆಗೆ ಹೆಚ್ಚುವರಿಯಾಗಿ 20 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.

**iii.** ಅಂಗವಿಕಲರ ಮೀಸಲಾತಿಯ ಕೋರಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸದರಿ ಮೀಸಲಾತಿಯಡಿ ಆಯ್ಕೆಯಾಗುವ (ಸಾಮಾನ್ಯ ವರ್ಗ/ ಪ್ರವರ್ಗ ಮೀಸಲಾತಿ) ಅಭ್ಯರ್ಥಿಯ ಅಂಗವೈಕಲ್ಯತೆಯುಳ್ಳ ಮೀಸಲಾತಿ ಪ್ರಮಾಣ ಪತ್ರದ ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹವರ ಆಯ್ಕೆಗುಂಪು GM_OT/GM_WM/GM_Rural/GM_Kan/GM_Ex Service Men/GM_YN/GM_Trans Gender ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ. ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/GM_Rural/GM_Kan/GM_Ex Service Men/GM_YN/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್‌ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಆಯ್ಕೆಯಾದಲ್ಲಿ ಅಂಗವೈಕಲ್ಯತೆಯುಳ್ಳ ಮೀಸಲಾತಿಯ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/GM_WM/GM_Rural/GM_Kan/GM_Ex Service Men/GM_YN/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ WCD 111 PHP 2022, ದಿನಾಂಕ : 19-01-2024 ರಂತೆ ಅನ್ವಯವಾಗುವ ವೃಂದದ ಹುದ್ದೆಗಳಿಗೆ ಸಂಬಂಧಿಸಿದ ವೈಕಲ್ಯತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

**(G) ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿಗಳು:**

i. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 23 ಎಸ್ ಆರ್ ಆರ್ 99 ದಿನಾಂಕ:23.11.2000 ರನ್ವಯ ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಸಿಆಸುಇ 252 ಸೇನೆನಿ 2020 (ಭಾಗ-1) ದಿನಾಂಕ:07.07.2021 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 25 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬದ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೇನಿ ದಿನಾಂಕ: 27.07.2001 ರಲ್ಲಿ **ನಿಗದಿಪಡಿಸಲಾದ ನಮೂನೆಯಲ್ಲಿ**

ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಶೀಲ್ದಾರರವರಿಂದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುವ ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸಿರುವ ಪ್ರಮಾಣ ಪತ್ರವನ್ನು ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು, ನಂತರದ ದಿನಾಂಕದಲ್ಲಿ ಪಡೆದಿರುವ ಪ್ರಮಾಣಪತ್ರವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ತಪ್ಪಿದಲ್ಲಿ, ಅಂತಹ ಅಭ್ಯರ್ಥಿಗಳು ಯೋಜನಾ ನಿರಾಶ್ರಿತ ಮೀಸಲಾತಿಗೆ ಅನರ್ಹರಾಗಿರುತ್ತಾರೆ.

ii. ಯೋಜನಾ ನಿರಾಶ್ರಿತ ಕುಟುಂಬದ ಮೀಸಲಾತಿಯ ಕೋರಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸದರಿ ಮೀಸಲಾತಿಯಡಿ ಆಯ್ಕೆಯಾಗುವ (ಸಾಮಾನ್ಯ ವರ್ಗ/ ಪ್ರವರ್ಗ ಮೀಸಲಾತಿ) ಅಭ್ಯರ್ಥಿಯ ಯೋಜನಾ ನಿರಾಶ್ರಿತ ಮೀಸಲಾತಿ ಪ್ರಮಾಣ ಪತ್ರದ ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹವರ ಆಯ್ಕೆಗುಂಪು GM_OT/GM_WM/GM_Rural/GM_Kan/GM_Ex Service Men/ GM_Trans Gender ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ. ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/ GM_Rural/GM_Kan/GM_Ex Service Men/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್ ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಆಯ್ಕೆಯಾದಲ್ಲಿ ಯೋಜನಾ ನಿರಾಶ್ರಿತ ಕುಟುಂಬದ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/GM_WM/ GM_Rural/GM_Kan/GM_Ex Service Men/GM_Trans Gender ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

**(H) ತೃತೀಯ ಲಿಂಗದ ಅಭ್ಯರ್ಥಿಗಳು:**

i. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 179 ಸೇನೇನಿ 2020, ದಿನಾಂಕ:06.07.2021 ರಂತೆ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2021 ನಿಯಮ 9 ಉಪನಿಯಮ (1) ರ ಖಂಡ (1ಸಿ) ರಂತೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದಲೂ ಶೇ. 1 (ಒಂದರಷ್ಟು) ಹುದ್ದೆಗಳನ್ನು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಿರಿಸಿದೆ. ಈ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ತಮ್ಮ "ಗುರುತಿನ ಪ್ರಮಾಣ ಪತ್ರವನ್ನು" "ತೃತೀಯ ಲಿಂಗಿಗಳು" ಕೇಂದ್ರ ಅಧಿನಿಯಮ (ಹಕ್ಕು ಮತ್ತು ಸಂರಕ್ಷಣೆ) ಕಾಯಿದೆ 2019" ಸೆಕ್ಷನ್ 5 ಮತ್ತು 6 ಅಥವಾ 7 ರಲ್ಲಿ ನಿಗದಿಪಡಿಸಿರುವ ನಮೂನೆ-3 ಅಥವಾ ನಮೂನೆ-4ನ್ನು ಈ ನೇಮಕಾತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಜಿಲ್ಲಾಧಿಕಾರಿಗಳಿಂದ ದೃಢೀಕರಿಸಿ ಪಡೆದಿರತಕ್ಕದ್ದು ಹಾಗೂ ಚಾಲ್ತಿಯಲ್ಲಿರಬೇಕು. ಹುದ್ದೆಗಾಗಿ ಅರ್ಜಿ ಸಲ್ಲಿಸುವ ನಮೂನೆಯಲ್ಲಿ 'ತೃತೀಯ ಲಿಂಗಿ / Transgender' ಎಂಬ ಪ್ರತ್ಯೇಕ ಕಾಲಂ ಅನ್ನು ಕಲ್ಪಿಸಲಾಗಿದ್ದು, ಅದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

ii. ತೃತೀಯ ಲಿಂಗದ ಮೀಸಲಾತಿಯ ಕೋರಿ, ಅಂತಿಮ ಆಯ್ಕೆ ಪಟ್ಟಿಯಲ್ಲಿ ಸದರಿ ಮೀಸಲಾತಿಯಡಿ ಆಯ್ಕೆಯಾಗುವ (ಸಾಮಾನ್ಯ ವರ್ಗ/ ಪ್ರವರ್ಗ ಮೀಸಲಾತಿ) ಅಭ್ಯರ್ಥಿಯ ತೃತೀಯ ಲಿಂಗದ ಮೀಸಲಾತಿ ಪ್ರಮಾಣ ಪತ್ರದ ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ ಅಂತಹವರ ಆಯ್ಕೆಗುಂಪು GM_OT/GM_WM/ GM_Rural/GM_Kan/GM_Ex Service Men/GM_YN ಎಂದು ಆಯ್ಕೆ ಪ್ರವರ್ಗ ಬದಲಾಯಿಸಿ, ನೇಮಕಾತಿ ನೀಡಲು ಅವಕಾಶವಿರುವುದಿಲ್ಲ. ಉತ್ತಮ ಮೆರಿಟ್‌ನೊಂದಿಗೆ (GM_OT/GM_WM/ GM_Rural/GM_Kan/GM_Ex Service Men/GM_YN ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ/ಮಹಿಳಾ ಮೀಸಲಾತಿ ಕಟ್ ಆಫ್ ಗಿಂತಲೂ ಹೆಚ್ಚು ಮೆರಿಟ್ ಹೊಂದಿದ್ದರೂ ಸಹ) ಆಯ್ಕೆಯಾದಲ್ಲಿ ತೃತೀಯ ಲಿಂಗ ಪ್ರಮಾಣ ಪತ್ರದ ನೈಜತೆ ಪಡೆಯುವುದು ಕಡ್ಡಾಯ. ನೈಜತೆ ಬಾರದಿದ್ದಲ್ಲಿ/ತಿರಸ್ಕೃತಗೊಂಡಲ್ಲಿ GM_OT/GM_WM/ GM_Rural/GM_Kan/GM_Ex Service Men/GM_YN ಅಥವಾ ಅಭ್ಯರ್ಥಿಯ ಮೀಸಲಾತಿ ಪ್ರವರ್ಗದ ಇತರೆ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ ಎಂದು ಆಯ್ಕೆ ಗುಂಪು ಬದಲಾಯಿಸಿ ನೇಮಕಾತಿ ನೀಡಲು ಅವಕಾಶವಿರುವುದಿಲ್ಲ.

**(I) ಸೇವಾನಿರತ ಅಭ್ಯರ್ಥಿ:**

ಸೇವಾನಿರತ ಅಭ್ಯರ್ಥಿಗಳು, ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 19 ಎಸ್ ಆರ್ ಆರ್ 2020 ಬೆಂಗಳೂರು ದಿನಾಂಕ : 12-10-2020 ರಂತೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು 2020 ರ ನಿಯಮ 11 ರನ್ವಯ ಯಾವುದೇ ಸೇವೆ ಅಥವಾ ಹುದ್ದೆಗೆ ಆಯ್ಕೆಯಾಗಲು ಅರ್ಜಿ ಸಲ್ಲಿಸುವ ಒಬ್ಬ ಸರ್ಕಾರಿ ನೌಕರನು ತನ್ನ ಅರ್ಜಿಯನ್ನು ನೇರವಾಗಿ ಆಯ್ಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಅಭ್ಯರ್ಥಿ ಆಯ್ಕೆಯನ್ನು ಅಧಿಸೂಚಿತಗೊಳಿಸಿದ ಕೂಡಲೇ, ಅಭ್ಯರ್ಥಿ ಆಯ್ಕೆಯಾದ ವಾಸ್ತವಾಂಶವನ್ನು ತಾನು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯ ಇಲಾಖಾ ಮುಖ್ಯಸ್ಥರಿಗೆ ತಿಳಿಸತಕ್ಕದ್ದು ಹಾಗೂ ಆತನು ಆಯ್ಕೆಯಾದ ಹುದ್ದೆಯ ನೇಮಕಾತಿಯನ್ನು ಒಪ್ಪಿಕೊಳ್ಳಲು ಅನುವಾಗುವಂತೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಸಲ್ಲಿಸತಕ್ಕದ್ದು.

**ವಿ.ಸೂ : ಅಭ್ಯರ್ಥಿಯು ಈಗಾಗಲೇ ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ (ಸೇವಾನಿರತ) ಶಿಕ್ಷಕರೊಬ್ಬರು ಅವರು ಯಾವ ವೃಂದದ ಹುದ್ದೆಯನ್ನು ಹೊಂದಿದ್ದಾರೋ ಅದೇ ವೃಂದದ ಹುದ್ದೆಗೆ ಈ ವಿಶೇಷ ನಿಯಮಗಳಡಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.**

**13] ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ :**

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪರೀಕ್ಷಾ ಪ್ರಾಧಿಕಾರವು ನಿಗದಿಪಡಿಸುವ ಆಯಾ ಜಿಲ್ಲಾ ವ್ಯಾಪ್ತಿಯ ಸ್ಥಳದಲ್ಲಿ ನಡೆಸಲಾಗುವುದು.

**14] ಸ್ಪರ್ಧಾತ್ಮಕ ಪರೀಕ್ಷೆ ವಿವರ:**

**ಪರೀಕ್ಷೆಯ ಹೆಸರು :** ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8ನೇತರಗತಿ) ಮತ್ತು ಗಣಕ ವಿಜ್ಞಾನ (CST) ಶಿಕ್ಷಕರು (1 ರಿಂದ 8 ನೇ ತರಗತಿ) ನೇಮಕಾತಿ ಪರೀಕ್ಷೆ-2026.

ಜಿಲ್ಲಾ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯನ್ನು ರಾಜ್ಯಾದ್ಯಂತ ಕೆಳಗಿನ ವೇಳಾಪಟ್ಟಿಯಂತೆ ನಡೆಸಲಾಗುವುದು.

**ಪರೀಕ್ಷೆಯ ವೇಳಾಪಟ್ಟಿ**

| ದಿನಾಂಕ | ಸಮಯ | ಪತ್ರಿಕೆ |
|---|---|---|
| **8-10-2026** | **10-00 AM to 12-00 PM** | **ಪತ್ರಿಕೆ – 1 (ಸಾಮಾನ್ಯ)** |
| | **02-30 PM to 04-30 PM** | **ಪತ್ರಿಕೆ -2 (ಗಣಕ ವಿಜ್ಞಾನ)** |
| **9-10-2026** | **10-00 AM to 12-00 PM** | **ಪತ್ರಿಕೆ-2 (ಸಮಾಜ ವಿಜ್ಞಾನ)** |
| | | **ಪತ್ರಿಕೆ-2 (ಜೀವ ವಿಜ್ಞಾನ)** |
| | **10-00 AM to 12-00 PM** | **ಪತ್ರಿಕೆ-2 (ಗಣಿತ ಮತ್ತು ವಿಜ್ಞಾನ)** |
| **10-10-2026** | **10-00 AM to 12-00 PM** | **ಪತ್ರಿಕೆ-2 (ಭಾಷಾ – ಕನ್ನಡ)** |
| | | **ಪತ್ರಿಕೆ-2 (ಭಾಷಾ - ಆಂಗ್ಲ)** |

**ಪತ್ರಿಕೆ-1** : **ವಿಷಯ ಹಾಗೂ ನಿಗದಿಪಡಿಸಿದ ಅಂಕಗಳು**

| ಕ್ರ.ಸ | ವಿಷಯ | ಅಂಕಗಳು |
|---|---|---|
| 01 | ಸಾಮಾನ್ಯ ಜ್ಞಾನ | 15 |
| 02 | ಪ್ರಚಲಿತ ವಿದ್ಯಮಾನಗಳು | 15 |
| 03 | ಸಾಮಾನ್ಯ ಕನ್ನಡ | 10 |
| 04 | ಸಾಮಾನ್ಯ ಇಂಗ್ಲಿಷ್ | 10 |
| 05 | ಶೈಕ್ಷಣಿಕ ಮನೋವಿಜ್ಞಾನ ಮತ್ತು ಮಾನವ ಅಭಿವೃದ್ಧಿ | 15 |
| 06 | ಗಣಕಯಂತ್ರ ಸಾಕ್ಷರತೆ | 15 |
| 07 | ಮೌಲ್ಯ ಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ | 20 |
| **ಒಟ್ಟು** | | 100 |

**ಪತ್ರಿಕೆ-2 ವಿಷಯ ಹಾಗೂ ನಿಗದಿಪಡಿಸಿದ ಅಂಕಗಳು**

| ಕ್ರ.ಸ | ವಿಷಯ | ಅಂಕಗಳು |
|---|---|---|
| | **ಪತ್ರಿಕೆ-2-ಕನ್ನಡ ಭಾಷೆ (6-8ನೇ ತರಗತಿ)** | |
| 1 | ವಿಷಯ ಜ್ಞಾನ : **ಕನ್ನಡ ಭಾಷೆ** – ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |
| | **ಪತ್ರಿಕೆ-2-ಆಂಗ್ಲಭಾಷೆ (6-8ನೇ ತರಗತಿ)** | |
| 2 | ವಿಷಯ ಜ್ಞಾನ : **ಆಂಗ್ಲಭಾಷೆ** – ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |
| | **ಪತ್ರಿಕೆ-2-ಗಣಿತ ಮತ್ತು ವಿಜ್ಞಾನ (6-8ನೇ ತರಗತಿ)** | |
| 3 | ವಿಷಯ ಜ್ಞಾನ : **ಗಣಿತ ಮತ್ತು ಭೌತ ವಿಜ್ಞಾನ**, – ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |
| | **ಪತ್ರಿಕೆ-2- ಜೀವ ವಿಜ್ಞಾನ (6-8ನೇ ತರಗತಿ)** | |
| 4 | ವಿಷಯ ಜ್ಞಾನ : **ರಸಾಯನ ಶಾಸ್ತ್ರ ಮತ್ತು ಜೀವ ವಿಜ್ಞಾನ**, – ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್ ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |
| | **ಪತ್ರಿಕೆ-2-ಸಮಾಜ ವಿಜ್ಞಾನ** (6-8ನೇ ತರಗತಿ) | |
| 5 | ವಿಷಯ ಜ್ಞಾನ : **ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯವಹಾರ ಅಧ್ಯಯನ, ಸಮಾಜಶಾಸ್ತ್ರ ಮತ್ತು ಭೂಗೋಳಶಾಸ್ತ್ರ** ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್ ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |
| | **ಪತ್ರಿಕೆ-2-ಗಣಕ ವಿಜ್ಞಾನ (1-8ನೇ ತರಗತಿ)** | |
| 6 | ವಿಷಯ ಜ್ಞಾನ : **ಗಣಕ ವಿಜ್ಞಾನ**, – ವಸ್ತುನಿಷ್ಠ ಮಾದರಿಯ 100 ಪ್ರಶ್ನೆಗಳು: (OMR ಶೀಟ್‌ನಲ್ಲಿ ಉತ್ತರಿಸಬೇಕಿರುತ್ತದೆ). | 100 ಅಂಕಗಳಿಗೆ |

ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಮುದ್ರಿತವಾಗಿರುತ್ತದೆ. ಮೂಲ ಪ್ರಶ್ನೆಯು ಆಂಗ್ಲ ಮಾಧ್ಯಮದಲ್ಲಿ ಕೂಡಿರುತ್ತದೆ. ಅಭ್ಯರ್ಥಿಯು ಆಂಗ್ಲ ಭಾಷೆಯ ಪ್ರಶ್ನೆಯನ್ನೇ ಮೂಲ ಪ್ರಶ್ನೆಯೆಂದು ಪರಿಗಣಿಸುವುದು.

**15) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಪಾಲಿಸಬೇಕಾದ ಸೂಚನೆಗಳು:**

i. OMR ಉತ್ತರ ಪತ್ರಿಕೆಯು ಅಭ್ಯರ್ಥಿಯ ವಿವರಗಳನ್ನೊಳಗೊಂಡ ಪೂರ್ವ ಮುದ್ರಿತವಾಗಿದ್ದು, ಅಭ್ಯರ್ಥಿಯು ಪರೀಕ್ಷಾ ಕೊಠಡಿಯಲ್ಲಿ ಉತ್ತರಿಸುವ ತನ್ನದೇ OMR ಉತ್ತರ ಪತ್ರಿಕೆ ಎಂಬುದನ್ನು ಖಾತ್ರಿಪಡಿಸಿಕೊಂಡು, OMR ಮತ್ತು ಪರೀಕ್ಷಾ ಪ್ರವೇಶ ಪತ್ರದಲ್ಲಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ii. ಅಭ್ಯರ್ಥಿಯು ತನಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರ ಮತ್ತು ಕೊಠಡಿಯಲ್ಲಿ ಮತ್ತು ಅವರ ಆಸನದಲ್ಲಿಯೇ ಕುಳಿತುಕೊಳ್ಳತಕ್ಕದ್ದು ಹಾಗೂ ತನಗೆ ನಿಗದಿಪಡಿಸಿದ OMR ನಲ್ಲಿಯೇ ಉತ್ತರಿಸತಕ್ಕದ್ದು.

iii. OMR ಮೇಲೆ ಅಭ್ಯರ್ಥಿಯು ತನ್ನ ನೊಂದಣಿ ಸಂಖ್ಯೆಯನ್ನು OMR ನಲ್ಲಿ ನಿಗದಿಪಡಿಸಿದ ಸ್ಥಳ/ಅಂಕಣದಲ್ಲಿಯೇ ಸ್ಪಷ್ಟವಾಗಿ ಬರೆದು ಕ್ರಮಾನುಗತವಾಗಿ ಸೂಕ್ತ ವೃತ್ತದಲ್ಲಿ ಪೂರ್ಣ ವೃತ್ತವನ್ನಾಗಿ ಶೇಡ್ ಮಾಡುವುದು.

iv. OMR ನಲ್ಲಿ ಪ್ರತಿ ಪ್ರಶ್ನೆಗೆ ಬಹು ಆಯ್ಕೆಗಳನ್ನು ನೀಡಿದ್ದು, ಒಂದು ಪ್ರಶ್ನೆಗೆ ಒಂದು ವೃತ್ತವನ್ನು ಮಾತ್ರ ಪೂರ್ಣವಾಗಿ ಶೇಡ್ ಮಾಡುವುದು. **(ಅಪೂರ್ಣವಾಗಿ ಶೇಡ್ ಮಾಡಿರುವ / Tick Mark ಮಾಡಿರುವ/ಚುಕ್ಕೆ ಇಟ್ಟಿರುವ, White fluid ಹಾಕಿರುವ / Blade ನಲ್ಲಿ Scratch ಮಾಡಿರುವ/ವಿರೂಪಗೊಳಿಸಿರುವ/** ಒಂದಕ್ಕಿಂತ ಹೆಚ್ಚಿನ ವೃತ್ತ ಗಳನ್ನು ಶೇಡ್ ಮಾಡಿದ್ದಲ್ಲಿ ಅಂತಹ ಪ್ರಕರಣಗಳನ್ನು ಯಾವುದೇ ಕಾರಣಕ್ಕೂ ಮೌಲ್ಯಮಾಪನಕ್ಕೆ /ಸ್ಕೋರಿಂಗ್‌ಗೆ ಪರಿಗಣಿಸಲಾಗುವುದಿಲ್ಲ.

v. ಪ್ರತಿ ಪ್ರಶ್ನೆಗೆ ಉತ್ತರಕ್ಕಾಗಿ ನಾಲ್ಕು ಆಯ್ಕೆಗಳನ್ನು ನೀಡಲಾಗಿದ್ದು, ಅದರಂತೆ OMR Sheet ನಲ್ಲಿ ನಾಲ್ಕು ವೃತ್ತಗಳನ್ನು ನೀಡಲಾಗಿದೆ. ಮುಂದುವರೆದು, ಅಭ್ಯರ್ಥಿಯು ನಾಲ್ಕು ಆಯ್ಕೆಗಳಲ್ಲಿ ಯಾವುದೇ ಉತ್ತರದ ಆಯ್ಕೆಯನ್ನು / ವೃತ್ತವನ್ನು ಶೇಡ್ ಮಾಡದೇ ಇದ್ದಲ್ಲಿ ಅಂತಹ ಸಂದರ್ಭದಲ್ಲಿ 5ನೇ ವೃತ್ತವನ್ನು ಕಡ್ಡಾಯವಾಗಿ ಶೇಡ್ ಮಾಡತಕ್ಕದ್ದು. ಐದನೇ ಆಯ್ಕೆ/ ವೃತ್ತವನ್ನು ಶೇಡ್ ಮಾಡಲು ಕೊನೆಯ ಬೆಲ್ ಆದ ನಂತರ ಹೆಚ್ಚುವರಿಯಾಗಿ ಐದು ನಿಮಿಷಗಳನ್ನು ನೀಡಲಾಗುವುದು.

vi. **ಯಾವ ಅಭ್ಯರ್ಥಿಯು OMR Sheet ನಲ್ಲಿ ಯಾವುದೇ ಒಂದು ಪ್ರಶ್ನೆಯ ಉತ್ತರಕ್ಕಾಗಿ ನೀಡಿರುವ ನಾಲ್ಕು ಆಯ್ಕೆಯ ವೃತ್ತಗಳಲ್ಲಿ ಯಾವುದನ್ನೂ ಶೇಡ್ ಮಾಡದೇ ಇದ್ದಲ್ಲಿ 5ನೇ ವೃತ್ತವನ್ನು ಕಡ್ಡಾಯವಾಗಿ ಶೇಡ್ ಮಾಡತಕ್ಕದ್ದು. ಒಂದು ವೇಳೆ, 5 ವೃತ್ತಗಳಲ್ಲಿ ಯಾವುದಕ್ಕೂ ಶೇಡ್ ಮಾಡದೇ ಇದ್ದಲ್ಲಿ ಅಂತಹ**

**ಪ್ರಶ್ನೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಗಳಿಸುವ ಅಂಕದಲ್ಲಿ** ಪ್ರತಿ **ಅಂತಹ ಪ್ರಶ್ನೆಯಿಂದ 0.25 ಅಂಕಗಳನ್ನು ಕಡಿತಗೊಳಿಸಲಾಗುವುದು**.

vii. OMR ಉತ್ತರ ಪತ್ರಿಕೆಯನ್ನು ಯಾವುದೇ ಕಾರಣಕ್ಕೂ ಮಡಚಿರುವ/Cross Mark ಮಾಡಿರುವ/ ವಿರೂಪಗೊಳಿಸಿರುವ OMRಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

viii. ಅಭ್ಯರ್ಥಿಯು OMR ಉತ್ತರ ಪತ್ರಿಕೆಯಲ್ಲಿ Blue ink /Black ink Ball Point Pen ನಲ್ಲಿ ಮಾತ್ರ ಶೇಡ್ ಮಾಡುವುದು. ಯಾವುದೇ ಕಾರಣಕ್ಕೂ Ink Pen / Gel Penಗಳನ್ನು ಬಳಸಬಾರದು. ಅಭ್ಯರ್ಥಿಯು ಒಂದೇ ಬಣ್ಣದ ಒಂದೇ ಪೆನ್‌ನಿಂದ ಉತ್ತರಿಸುವಂತೆ ನೋಡಿಕೊಳ್ಳುವುದು ಹಾಗೂ ಯಾವುದೇ ಕಾರಣಕ್ಕೂ ಬಣ್ಣ ಬದಲಾಗದಂತೆ ಎಚ್ಚರ ವಹಿಸುವುದು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ಪೆನ್ ಅನ್ನು ಬದಲಾಯಿಸುವಾಗ ಕಡ್ಡಾಯವಾಗಿ ಕೊಠಡಿ ಮೇಲ್ವಿಚಾರಕರ ಗಮನಕ್ಕೆ ತಂದು, ಅನುಮತಿ ಪಡೆದು, ಈ ಬಗ್ಗೆ ಅಭ್ಯರ್ಥಿ ಮತ್ತು ಕೊಠಡಿ ಮೇಲ್ವಿಚಾರಕರು ಲಿಖಿತ ದೃಢೀಕರಣ ನೀಡುವುದು ಕಡ್ಡಾಯ. ಅಭ್ಯರ್ಥಿಯು ಪೆನ್ ಬದಲಿಸಿ, ಉತ್ತರಿಸಿದ ಬಗ್ಗೆ ಅಭ್ಯರ್ಥಿ ಮತ್ತು ಕೊಠಡಿ ಮೇಲ್ವಿಚಾರಕರು ಒಟ್ಟಾಗಿ ಲಿಖಿತ ದೃಢೀಕರಣ ಸಲ್ಲಿಸಿಲ್ಲದಿದ್ದಲ್ಲಿ ಅಂತಹ OMR ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ. ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು

**16] ಕೀ ಉತ್ತರ ಪ್ರಕಟಣೆ:**

ಸ್ಪರ್ಧಾತ್ಮಕ ಪರೀಕ್ಷೆ ಸಂಪೂರ್ಣವಾಗಿ ಮುಗಿದ 02 ದಿನಗಳ ನಂತರ ಇಲಾಖಾ ವೆಬ್‌ಸೈಟ್ ನಲ್ಲಿ ಕೀ ಉತ್ತರಗಳನ್ನು ಪ್ರಕಟಿಸಲಾಗುವುದು. ಪ್ರಕಟಿಸಲಾದ ಕೀ ಉತ್ತರಗಳಿಗೆ ಆನ್‌ಲೈನ್ ಮೂಲಕ ಆಕ್ಷೇಪಣೆ ಸಲ್ಲಿಸಲು 7 ಕಛೇರಿ ಕೆಲಸದ ದಿನಗಳ (Working days) ಅವಕಾಶ ನೀಡಲಾಗುವುದು. ಆಕ್ಷೇಪಣೆಗಳನ್ನು ವಿಷಯ ಪರಿಣಿತರು ಪರಿಶೀಲಿಸಿ ದೃಢೀಕರಿಸಿದ ನಂತರ ಅಂತಿಮ ಕೀ-ಉತ್ತರಗಳನ್ನು ಪ್ರಕಟಿಸಲಾಗುವುದು. ಈ ಕೀ ಉತ್ತರಗಳನ್ನು ಪರಿಗಣಿಸಿ, ಅಭ್ಯರ್ಥಿಗಳ ಓ.ಎಂ.ಆರ್ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದು.

ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಯ ಬಹು ಆಯ್ಕೆ ಪ್ರಶ್ನೆಗಳ ಕೀ-ಉತ್ತರಗಳಿಗೆ ನಿಗದಿತ ದಿನಾಂಕದೊಳಗೆ ಆಕ್ಷೇಪಣೆಗಳನ್ನು ಅಭ್ಯರ್ಥಿಗಳಿಂದ ಆಹ್ವಾನಿಸಲಾಗುವುದು. ಅಭ್ಯರ್ಥಿಗಳು ಸೂಕ್ತ ಆಧಾರ/ ಸಮರ್ಥನೀಯ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಇಲಾಖೆಯು ಸೂಚಿಸಿರುವ ವಿಧಾನದಲ್ಲಿ ಆನ್‌ಲೈನ್ ಮೂಲಕವೇ ಸಲ್ಲಿಸುವುದು. ಈ ರೀತಿ ಸಲ್ಲಿಸುವ ಪ್ರತಿ ಆಕ್ಷೇಪಣೆಗೆ ಅಭ್ಯರ್ಥಿಯು ರೂ.100/- ಸಂಸ್ಕರಣಾ ಶುಲ್ಕವಾಗಿ ಪಾವತಿಸುವುದು ಕಡ್ಡಾಯ. ನಿಗದಿತ ನಮೂನೆ ಹಾಗೂ ಪ್ರತಿ ಆಕ್ಷೇಪಣೆಗೆ ನಿಗದಿತ ಶುಲ್ಕ ಪಾವತಿಸದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ರೀತಿ ಸ್ವೀಕರಿಸಿದ ಆಕ್ಷೇಪಣೆಗಳು ನೈಜತೆಯಿಂದ ಕೂಡಿದ್ದು, ಆಕ್ಷೇಪಣೆಯು ಪರಿಗಣಿಸಲು ಅರ್ಹವಾಗಿ, ಇಲಾಖೆಯು ಅಂತಹ ಆಕ್ಷೇಪಣೆಯನ್ನು ಪರಿಗಣಿಸಿದಲ್ಲಿ ಅಭ್ಯರ್ಥಿಯಿಂದ ಪಾವತಿಸಲಾದ ಶುಲ್ಕದ (ಪರಿಗಣಿಸಲಾದ ಆಕ್ಷೇಪಣೆಯ) ಮೊತ್ತವನ್ನು ಸಂಬಂಧಪಟ್ಟ ಅಭ್ಯರ್ಥಿಗೆ ಮರುಪಾವತಿಸಲಾಗುವುದು. ಸೂಕ್ತ ಆಧಾರವಿಲ್ಲದ/ನೈಜತೆಯಿಂದ ಕೂಡಿರದ/ಪರಿಗಣಿಸದ ಆಕ್ಷೇಪಣೆಗೆ ಅಭ್ಯರ್ಥಿಯಿಂದ ಪಾವತಿಸಲಾದ ಶುಲ್ಕವನ್ನು ಮರುಪಾವತಿಸದೇ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**17] ಸ್ಪರ್ಧಾತ್ಮಕ ಪರೀಕ್ಷೆ ಫಲಿತಾಂಶ ಪ್ರಕಟಣೆ:**

ಸ್ಪರ್ಧಾತ್ಮಕ ಪರೀಕ್ಷೆ ಮೌಲ್ಯಮಾಪನ ಮುಕ್ತಾಯವಾದ ನಂತರ ಫಲಿತಾಂಶವನ್ನು ಪ್ರಕಟಿಸಲಾಗುವುದು ಹಾಗೂ ಈ ಬಗ್ಗೆ ರಾಜ್ಯ ಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಮಾಹಿತಿಯನ್ನು ನೀಡಲಾಗುವುದು. ಅಭ್ಯರ್ಥಿಗಳು ತಮ್ಮ ಫಲಿತಾಂಶವನ್ನು ಹಾಗೂ ತಮ್ಮ Derived percentage ನ್ನು ವೆಬ್‌ಸೈಟ್‌ನಲ್ಲಿ ತಮ್ಮ ಲಾಗಿನ್ ಮೂಲಕ ತಿಳಿದುಕೊಳ್ಳಬಹುದಾಗಿದೆ.

**18] ಅಭ್ಯರ್ಥಿಗಳ ಮಾಹಿತಿ ಸಂಬಂಧ ಆಕ್ಷೇಪಣೆ ಸ್ವೀಕರಿಸಿ ದಾಖಲಿಸುವುದು:**

ಅಭ್ಯರ್ಥಿಯು ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು ಮತ್ತು ಆಯ್ಕೆಗೆ ನಿಗದಿಪಡಿಸಿದ ಪರೀಕ್ಷೆಯಲ್ಲಿ ಪಡೆದ ಅಂಕಗಳು ಹಾಗೂ ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳ ಪೂರ್ಣ ಮಾಹಿತಿಯನ್ನು ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಈ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಿದ ನಂತರ ನಿಗದಿತ ಸಮಯ ನೀಡಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಿಸಿದ ಶೈಕ್ಷಣಿಕ ಮಾಹಿತಿಯಲ್ಲಿ ವ್ಯತ್ಯಾಸವಾಗಿದ್ದಲ್ಲಿ ಮಾತ್ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗುತ್ತದೆ. **ಆದರೆ ಮೂಲ ಅರ್ಜಿಯಲ್ಲಿ ದಾಖಲಿಸದಿರುವ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳ ಕುರಿತಾದ ಯಾವುದೇ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ.** ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಭ್ಯರ್ಥಿಗಳು ನೀಡಿದ ಶೈಕ್ಷಣಿಕ ದಾಖಲೆಗಳ ಆಧಾರದ ಮೇಲೆ ಪರಿಷ್ಕರಿಸಿ, ಪುನಃ ಶಾಲಾ ಶಿಕ್ಷಣ ಇಲಾಖಾ ವೆಬ್‌ಸೈಟ್‌ನಲ್ಲಿ ಪರಿಷ್ಕೃತ ಪಟ್ಟಿಯನ್ನು ಪ್ರಕಟಿಸಲಾಗುವುದು.

**19] ತಾತ್ಕಾಲಿಕ ಪಟ್ಟಿ ಪ್ರಕಟಿಸುವ ಮುನ್ನ ದಾಖಲಾತಿಗಳ ಪರಿಶೀಲನೆ:**

i. ಅಭ್ಯರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆ, ಟಿ.ಇ.ಟಿ, ಪದವಿ ಪರೀಕ್ಷೆ ಹಾಗೂ ಶಿಕ್ಷಕರ ಶಿಕ್ಷಣ ಕೋರ್ಸ್‌ಗಳಲ್ಲಿ ಗಳಿಸಿರುವ ಅಂಕಗಳನ್ನು ಪರಿಗಣಿಸಿ Derived percentage ಲೆಕ್ಕಹಾಕಲಾಗುವುದು.

ii. ಮೆರಿಟ್ ಆಧಾರದ ಮೇಲೆ ಅರ್ಹರಾದ ಹಾಗೂ ಕ್ಲೇಮು ಮಾಡಿರುವ ಮೀಸಲಾತಿಯನುಸಾರ ಅಧಿಸೂಚಿತ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಎರಡರಷ್ಟರವರೆಗಿನ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ದಾಖಲಾತಿಗಳ ಪರಿಶೀಲನೆಯ ಉದ್ದೇಶಕ್ಕಾಗಿ ಕರೆಯಲಾಗುವುದು.

iii. ಅಂತಹ ಅಭ್ಯರ್ಥಿಗಳ ವಿವರಗಳನ್ನು ವೆಬ್‌ಸೈಟ್ https://schooleducation.kar.nic.in ನಲ್ಲಿ ಪ್ರಕಟಿಸಲಾಗುವುದು, ಹಾಗೂ ದಿನಪತ್ರಿಕೆಗಳಲ್ಲಿ ಮಾಹಿತಿಯ ಪ್ರಕಟಣೆ ನೀಡಲಾಗುವುದು.
iv. ಎಲ್ಲಾ ಅಭ್ಯರ್ಥಿಗಳು ತಮ್ಮ ವಿವರಗಳನ್ನು ಅವರ ಲಾಗಿನ್ ಮೂಲಕ ಪರಿಶೀಲಿಸಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ನಿಗದಿತ ನಮೂನೆಯಲ್ಲಿ ನಿಗದಿತ ದಿನಾಂಕದೊಳಗೆ ಆಯ್ಕೆ ಪ್ರಾಧಿಕಾರಕ್ಕೆ ಅಗತ್ಯ ದಾಖಲೆಗಳನ್ನು ಸಲ್ಲಿಸಬಹುದು.
v. ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ಮಾಹಿತಿಯನ್ನು ಮಾತ್ರ ಸರಿಪಡಿಸಿಕೊಳ್ಳಲು ಅವಕಾಶವಿರುತ್ತದೆ. ಶೈಕ್ಷಣಿಕ ಮಾಹಿತಿಯನ್ನು ಹೊರತುಪಡಿಸಿ ಉಳಿದ ಯಾವುದೇ ಮಾಹಿತಿಯನ್ನು ಬದಲಾಯಿಸಿಕೊಳ್ಳಲು ಅವಕಾಶವಿರುವುದಿಲ್ಲ.
vi. ಮೂಲ ದಾಖಲಾತಿ / ಪ್ರಮಾಣ ಪತ್ರಗಳ ಪರಿಶೀಲನೆಯ ಸಮಯದಲ್ಲಿ ಅಭ್ಯರ್ಥಿಗಳ ಆಧಾರ್ ಗುರುತಿನ ನೈಜತೆಯನ್ನು ಪರಿಶೀಲನೆಗೆ ಒಳಪಡಿಸಲಾಗುವುದು. ಅದರಲ್ಲಿ ಅಭ್ಯರ್ಥಿಯ ನೈಜತೆ ಧೃಡಪಡದೇ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

**20] ಆಯ್ಕೆ ಪಟ್ಟಿ ತಯಾರಿಸುವ ವಿಧಾನ:**

i. ಆಯ್ಕೆ ಪಟ್ಟಿಯನ್ನು ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ತಯಾರಿಸಲಾಗುತ್ತದೆ. ಅರ್ಹತೆ ಮತ್ತು ಮೀಸಲಾತಿ ಬಗ್ಗೆ ವಿವರಗಳನ್ನು ಈಗಾಗಲೇ ನೀಡಿದೆ. ಆಯ್ಕೆ ಪಟ್ಟಿಯನ್ನು ಎರಡು ಹಂತದಲ್ಲಿ ತಯಾರಿಸಲಾಗುತ್ತದೆ.
ii. ಮೊದಲ ಹಂತ: ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆಗಳ ಆಹ್ವಾನ.
iii. ಎರಡನೇ ಹಂತ: ಮೂಲ ಪ್ರಮಾಣ ಪತ್ರಗಳ ಪರಿಶೀಲನೆ ಮತ್ತು ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ.

**21] ಆಯ್ಕೆ ಪಟ್ಟಿ:**

i. ಮೂಲ ದಾಖಲಾತಿಗಳ/ ಪ್ರಮಾಣ ಪತ್ರಗಳ ಪರಿಶೀಲನೆಯ ನಂತರ ಮತ್ತು ಶೈಕ್ಷಣಿಕ ಮಾಹಿತಿಗಳನ್ನು ಸರಿಪಡಿಸಲು ಕೋರಿ ಬಂದ ಆಕ್ಷೇಪಣೆಗಳ ಪರಿಶೀಲನೆ ಮಾಡಲಾಗುವುದು.
ii. ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಪೂರ್ವದಲ್ಲಿ ಅಧಿಸೂಚಿತ ಖಾಲಿ ಹುದ್ದೆಗಳ ಸಂಖ್ಯೆಯ ಎರಡರಷ್ಟು (1:2) ಪ್ರಮಾಣದಲ್ಲಿ ಅರ್ಹತೆಯ ಆಧಾರದ ಮೇಲೆ ದಾಖಲೆಗಳ ಪರಿಶೀಲನೆಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರಿಯಿಂದ ಆಹ್ವಾನಿಸಲಾಗುವುದು.
iii. ದಾಖಲೆಗಳ ಪರಿಶೀಲನೆಯ ನಂತರದಲ್ಲಿ ಅಧಿಸೂಚನೆಗೊಂಡ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾದ ಸಂಖ್ಯೆಯಲ್ಲಿ ಅಭ್ಯರ್ಥಿಗಳ 1:1 ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆಯ್ಕೆ ಪ್ರಾಧಿಕಾರಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವರು. ಈ ಬಗ್ಗೆ ಪ್ರಕಟಣೆಯನ್ನು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ನೀಡಲಾಗುತ್ತದೆ. ವೈಯಕ್ತಿಕವಾಗಿ ಈ ಬಗ್ಗೆ ಯಾವುದೇ ಸೂಚನೆ ನೀಡುವುದಿಲ್ಲ.
iv. ಪ್ರಕಟಿಸಲಾದ 1:1 ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸಿದಲ್ಲಿ ನಿಗದಿತ ದಿನಾಂಕದೊಳಗೆ ಆಯಾ ವಿಭಾಗೀಯ ಸಹ ನಿರ್ದೇಶಕರು ಹಾಗೂ ಆಯ್ಕೆ ಪ್ರಾಧಿಕಾರ-ಇವರಿಗೆ ಸಲ್ಲಿಸಬಹುದು. ಯಾವುದೇ ಅಭ್ಯರ್ಥಿಯು ಆಕ್ಷೇಪಣೆಗಳನ್ನು ಸಲ್ಲಿಸದಿದ್ದಲ್ಲಿ ಅಂತಿಮ ಆಯ್ಕೆಪಟ್ಟಿಯಲ್ಲಿ ಯಾವುದೇ ರೀತಿಯ ಪರಿಹಾರಕ್ಕೆ ಅರ್ಹತೆ ಪಡೆಯುವುದಿಲ್ಲ. ಹಾಗೂ ಅಂತಿಮ ಆಯ್ಕೆ ಪಟ್ಟಿಯ ಪ್ರಕಟಣೆಯ ನಂತರ ಪುನಃ ಅವರ ಅರ್ಹತೆಯ ಪರಿಶೀಲನೆಗಾಗಿ ಅಥವಾ ಇನ್ನಾವುದೇ ಪರಿಹಾರಕ್ಕಾಗಲೀ ಅವಕಾಶವಿರುವುದಿಲ್ಲ.
v. ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಆಯ್ಕೆ ಪ್ರಾಧಿಕಾರಿಯಿಂದ ಅಂತಹ ಆಕ್ಷೇಪಣೆಗಳನ್ನು ಪರಿಗಣಿಸಿ, ನಂತರ ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಸಮನಾದ ಸಂಖ್ಯೆಯಲ್ಲಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.
vi. ನೇಮಕಾತಿ ಸಮಯದಲ್ಲಿ ಅಭ್ಯರ್ಥಿಗಳು ಯಾವ ನಿರ್ದಿಷ್ಟ ಹುದ್ದೆಗೆ ಆಯ್ಕೆಯನ್ನು ಬಯಸುತ್ತಾರೋ ಅಂತಹ ಆಯ್ಕೆಯನ್ನು ಮಾತ್ರ ಆಯ್ಕೆ ಪಾಧಿಕಾರದ ಹಂತದಲ್ಲಿ ಪರಿಗಣಿಸಲಾಗುವುದು.
vii. ಮೇಲಿನಂತೆ ಸಿದ್ಧಪಡಿಸಲಾದ 1:1 ಮುಖ್ಯ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರುಗಳ ಅನುಕ್ರಮದಲ್ಲಿಯೇ ನೇಮಕಾತಿ ಪ್ರಾಧಿಕಾರದ ಹಂತದಲ್ಲಿ ನೇಮಕಾತಿಗೆ ಪರಿಗಣಿಸಲಾಗುವುದು.
viii. ಈ ನಿಯಮದ ಅಡಿಯಲ್ಲಿ ಪ್ರಕಟವಾಗಿರುವ 1:1 ಮುಖ್ಯ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರು ಪ್ರಕಟಗೊಂಡ ಮಾತ್ರಕ್ಕೆ ನೇಮಕಾತಿ ಹಕ್ಕು ದೊರೆತಂತೆ ಆಗುವುದಿಲ್ಲ.

**22] ಹೆಚ್ಚುವರಿ ಪಟ್ಟಿ:**

i. ಆಯ್ಕೆಯಾದ ಅಭ್ಯರ್ಥಿಗಳ 1:1 ಮುಖ್ಯ ಪಟ್ಟಿಯನ್ನು ಸಿದ್ಧಪಡಿಸಿದ ರೀತಿಯಲ್ಲಿಯೇ ನೇಮಕಾತಿ ಪ್ರಾಧಿಕಾರವು 1:1 ಮುಖ್ಯ ಪಟ್ಟಿಯಲ್ಲಿ ಸೇರಿರದ ಅಭ್ಯರ್ಥಿಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ 1:1 ಮುಖ್ಯ ಪಟ್ಟಿಯಲ್ಲಿನ ಯಾವುದೇ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಲಾಗಿದ್ದು, ಆತನು ನಿಗದಿತ ಅಥವಾ ವಿಸ್ತೃತ ಸೇರುವಿಕೆ ಕಾಲದ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ವಿಫಲರಾದರೆ ನೇಮಕಾತಿ ಪ್ರಾಧಿಕಾರವು ಹೆಚ್ಚುವರಿ ಪಟ್ಟಿಯ ಅಭ್ಯರ್ಥಿಗೆ ನೇಮಕಾತಿ ಆದೇಶವನ್ನು ನೀಡಬಹುದು. ಕರ್ತವ್ಯಕ್ಕೆ ಹಾಜರಾಗಲು ವಿಫಲರಾದ ಅಭ್ಯರ್ಥಿಯ ಜಾಗದಲ್ಲಿ ಆಯ್ಕೆಯಾಗುವ ಅಂತಹ ಅಭ್ಯರ್ಥಿಯ ಅರ್ಹತೆಯ ಅನುಕ್ರಮದಂತೆ ಹೆಚ್ಚುವರಿ ಪಟ್ಟಿಯಲ್ಲಿನ ಅದೇ ವಿಷಯ, ವರ್ಗ, ಲಂಬ ಮೀಸಲಾತಿ ಮತ್ತು ಸಮತಳ ಮೀಸಲಾತಿಗೆ ಸೇರಿದ ಅಭ್ಯರ್ಥಿಯನ್ನು ಪರಿಗಣಿಸಿ, 1:1 ಮುಖ್ಯ ಪಟ್ಟಿಯಲ್ಲಿನ ಒಟ್ಟು ಅಭ್ಯರ್ಥಿಗಳ ಶೇಕಡಾ ಹತ್ತನ್ನು (10%) ಮೀರದಂತೆ ಸಿದ್ಧಪಡಿಸಲಾಗುವುದು.

ii. ಆಯ್ಕೆಯಾದ ಅಭ್ಯರ್ಥಿಗಳ 1:1 ಮುಖ್ಯ ಪಟ್ಟಿಯಲ್ಲಿನ ಯಾವುದೇ ಅಭ್ಯರ್ಥಿಗೆ ನೇಮಕಾತಿ ಆದೇಶ ಹೊರಡಿಸಿದ್ದು, ಅಂತಹ ಅಭ್ಯರ್ಥಿಯು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗಲು ವಿಫಲರಾದರೆ, ನೇಮಕಾತಿ ಪ್ರಾಧಿಕಾರದಿಂದ ಅಂತಹ ಖಾಲಿ ಹುದ್ದೆಗೆ ಹೆಚ್ಚುವರಿ ಪಟ್ಟಿಯಿಂದ ನಿಯಮಾನುಸಾರ ಅರ್ಹ ಅಭ್ಯರ್ಥಿಯನ್ನು ನೇಮಿಸಲಾಗುವುದು.

iii. ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಿದ ಹೆಚ್ಚುವರಿ ಆಯ್ಕೆ ಪಟ್ಟಿಯು ಪ್ರಕಟಗೊಂಡ ದಿನಾಂಕದಿಂದ ಆರು (6) ತಿಂಗಳ ಅವಧಿಗೆ ಮಾತ್ರ ಸಿಂಧುವಾಗಿರಲಿದೆ.

**23] ಅಭ್ಯರ್ಥಿಗಳ ನೇಮಕಾತಿ**

ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ನೇಮಕಾತಿ ಪ್ರಾಧಿಕಾರಿಯು ಅಂತಹ ಪ್ರತಿಯೊಬ್ಬ ಅಭ್ಯರ್ಥಿಯು ಸಲ್ಲಿಸಿದ ಪ್ರಮಾಣಪತ್ರಗಳ ಸತ್ಯಾಸತ್ಯತೆ ಮತ್ತು ಕರ್ನಾಟಕ ನಾಗರಿಕ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಬಂಧನೆಗಳಿಗೆ ಅನುಸಾರವಾಗಿ ಅವರ ಸೂಕ್ತತೆ ಮತ್ತು ದೈಹಿಕ ಸದೃಢತೆಯ ಬಗ್ಗೆ ಸೂಕ್ತ ಪರಿಶೀಲನೆಯನ್ನು ಕೈಗೊಂಡು ಹಾಗೂ ನೇಮಕಾತಿಗೆ ಎಲ್ಲಾ ಅರ್ಹತೆ, ಮಾನದಂಡ ಮತ್ತು ಷರತ್ತುಗಳನ್ನು ಅಭ್ಯರ್ಥಿಯು ಪೂರೈಸಿರುವುದನ್ನು ಖಾತ್ರಿ ಪಡಿಸಿಕೊಂಡ ನಂತರವೇ, ಅದೇ ಅನುಕ್ರಮದಲ್ಲಿ ನೇಮಕಾತಿಗೆ ಪರಿಗಣಿಸಲಾಗುವುದು.

**24] ಪ್ರಮುಖವಾದ ಸೂಚನೆಗಳು**,:-

i. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಿಗದಿತ ನಮೂನೆಯಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬೇಕು.

ii. ನಿಗದಿತ ನಮೂನೆಯಲ್ಲಿ ಸಲ್ಲಿಸದೇ ಇರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಆಯ್ಕೆಗೆ ಪರಿಗಣಿಸುವುದಿಲ್ಲ.

iii. ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಆನ್‌ಲೈನ್ ಮೂಲಕವೇ ಪಡೆಯತಕ್ಕದ್ದು,

iv. ಅಭ್ಯರ್ಥಿಯು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹಾಜರಾದ ಮಾತ್ರಕ್ಕೆ ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ. ಇದರ ಜೊತೆಗೆ ಆಯಾ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಹೊಂದಿರತಕ್ಕದ್ದು.

v. ಅರ್ಜಿಗಳನ್ನು ದಿನಾಂಕ: 18-08-2026 ರಿಂದ ದಿನಾಂಕ: 07-09-2026 ರೊಳಗೆ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಂಚೆ ಮೂಲಕ ಅಥವಾ ಇನ್ನಾವುದೇ ಮಾರ್ಗದಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

vi. ಅಭ್ಯರ್ಥಿಗಳು ಸಂಬಂಧಪಟ್ಟ **ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ 1:2 ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು** ತಮ್ಮ ಎಲ್ಲಾ ಪ್ರಮಾಣ ಪತ್ರಗಳ ಮೂಲ ಪ್ರತಿಗಳೊಂದಿಗೆ ನೇಮಕಾತಿ ಪ್ರಾಧಿಕಾರಕ್ಕೆ ದಾಖಲೆಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು ಹಾಜರಾಗಬೇಕು.

vii. ಅಭ್ಯರ್ಥಿಗಳು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ ಮತ್ತು ಸಹಿಯನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿಯೇ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡುವುದು.

**viii.** ಪರಿಶೀಲನೆಯ ಸಮಯದಲ್ಲಿ **ಸುಳ್ಳು ದಾಖಲೆ/ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ.**

ix. **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಮೀಸಲಾತಿ ಕ್ಲೇಮ್ ಮಾಡಿ, 1:1 ಮುಖ್ಯ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದಲ್ಲಿ (GM) ಆಯ್ಕೆಯಾದರೂ ಅಥವಾ ಯಾವುದೇ ಪ್ರವರ್ಗದ ಮೀಸಲಾತಿಯಡಿಯಲ್ಲಿ ಆಯ್ಕೆಯಾದರೆ ಸದರಿಯವರು ಕ್ಲೇಮ್ಡ್ ಮೀಸಲಾತಿಗೆ ತಕ್ಕಂತೆ ಸಿಂಧುತ್ವ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು. ಸಿಂಧುತ್ವ ಪ್ರಮಾಣ ಪತ್ರ ಹಾಜರು ಪಡಿಸದ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.**

x. ಆಯ್ಕೆಪಟ್ಟಿಯಲ್ಲಿ ಸೇರ್ಪಡೆಯಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿಗೆ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.

xi. ಈ ನೇಮಕಾತಿಯು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.

xii. ಯಾವುದೇ ಹಂತದಲ್ಲಿ ತಪ್ಪು ಮಾಹಿತಿಯ ಆಧಾರದ ಮೇಲೆ ಆಯ್ಕೆಯಾದ ಅಥವಾ ಅನರ್ಹತೆಯ ಕಾರಣಗಳಿಗಾಗಿ ಅಭ್ಯರ್ಥಿಯ ಹೆಸರನ್ನು ಪಟ್ಟಿಯಿಂದ ಕೈಬಿಡುವ ಅಥವಾ ನೇಮಕಾತಿ ಆದೇಶವನ್ನು ರದ್ದುಗೊಳಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ.

xiii. ಅಭ್ಯರ್ಥಿಗಳು ಅವರ ಅರ್ಜಿಗಳಲ್ಲಿ ಭರ್ತಿ ಮಾಡಿರುವ ಮಾಹಿತಿಗಳ ಆಧಾರದ ಮೇಲೆ ಅವರಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಪ್ರವೇಶ ಪತ್ರಗಳನ್ನು ನೀಡಲಾಗುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಅಂಕಗಳ ಮಾಹಿತಿ, ಮೀಸಲಾತಿ, ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಪೂರ್ಣ ಮಾಹಿತಿ ನೀಡದ ಅಥವಾ ತಪ್ಪು ಮಾಹಿತಿ ನೀಡಿದ ಸಂದರ್ಭಗಳಲ್ಲಿ ಮುಂದಿನ ಆಗುಹೋಗುಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರು.

xiv. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿಗಳಿಗೆ ಸಂಬಂಧಿತ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಮನವಿ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.

xv. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

xvi. ಅಭ್ಯರ್ಥಿ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿ ಪ್ರತಿ, ಪ್ರವೇಶ ಪತ್ರ, ಶುಲ್ಕ ಪಾವತಿಸಿದ ಶುಲ್ಕದ ಚಲನ್ ಪ್ರತಿ, ಸ್ವೀಕೃತಿ ಪತ್ರ ಹಾಗೂ ಇತರೆ ದಾಖಲೆಗಳನ್ನು ಆಯ್ಕೆ ಪ್ರಕ್ರಿಯೆ ಮುಗಿಯುವವರೆಗೆ ಸುರಕ್ಷಿತವಾಗಿ ಇಟ್ಟುಕೊಳ್ಳತಕ್ಕದ್ದು. ಈ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅರ್ಜಿ ಸಲ್ಲಿಸಬೇಕಾದ ವಿಧಾನ, ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳ ವಿವರಗಳನ್ನು ಅಭ್ಯರ್ಥಿಗಳು ಗಮನವಿಟ್ಟು ಓದಿಕೊಳ್ಳತಕ್ಕದ್ದು.

xvii. **ದುರ್ನಡತೆ**: ಒಬ್ಬ ಅಭ್ಯರ್ಥಿಯು ನಕಲು ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂಬ ಬಗ್ಗೆ / ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ಆಯ್ಕೆ ಪ್ರಾಧಿಕಾರದಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದೇ ಅಲ್ಲದೇ, ಆಯ್ಕೆ ಪ್ರಾಧಿಕಾರವು ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು ಹಾಗೂ ಮುಂದೆ ಕೇಂದ್ರೀಕೃತ ದಾಖಲಾತಿ ಘಟಕದಿಂದ ನಡೆಸಲಾಗುವ ಯಾವುದೇ ಪರೀಕ್ಷೆಗಳಿಗೆ /ನೇಮಕಾತಿಗಳಿಗೆ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

xviii. ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸುವಾಗ ಮೂಲ ಅರ್ಜಿಯಲ್ಲಿ ದಾಖಲಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಆಕ್ಷೇಪಣೆ ಸಲ್ಲಿಸಬಹುದು. [ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ] ನಮೂದಿಸಲು ಬಿಟ್ಟುಹೋಗಿದ್ದ ಯಾವುದೇ ಮಾಹಿತಿಯನ್ನು ಹೊಸದಾಗಿ ದಾಖಲಿಸಲು ಅವಕಾಶವಿರುವುದಿಲ್ಲ. ಅಂತಹ ಆಕ್ಷೇಪಣೆ ಮತ್ತು ಲಗತ್ತುಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು.

xix. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಸಂಖ್ಯೆಯನ್ನು ನಮೂದಿಸುವುದು ಕಡ್ಡಾಯವಾಗಿರುತ್ತದೆ. 1:1 ಮುಖ್ಯ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ, ಆಧಾರ್ ನೋಂದಣಿಯ ನೈಜತೆಯನ್ನು ಪರಿಶೀಲಿಸಿ ಅಭ್ಯರ್ಥಿಯ ಗುರುತಿಸುವಿಕೆಯನ್ನು ಖಾತರಿಪಡಿಸಿಕೊಳ್ಳಲಾಗುವುದು.

xx. ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಸಂಬಂಧ ಆಯ್ಕೆ ಪ್ರಾಧಿಕಾರಿ / ನೇಮಕಾತಿ ಪ್ರಾಧಿಕಾರಿಗಳು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ https://schooleducation.karnataka.gov.in ನಲ್ಲಿ ಅವಲೋಕಿಸುವುದು.

**25] ಆಕ್ಷೇಪಣೆಗಳಿಗೆ ಸಂಬಂಧಪಟ್ಟಂತೆ ಪ್ರಮುಖ ಸೂಚನೆಗಳು:**

2026ರ ಸರ್ಕಾರಿ ಪ್ರಾಥಮಿಕ ಶಾಲಾ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಗಣಕ ವಿಜ್ಞಾನ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುವುದು, ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ವಿಷಯ ಪರಿಣಿತರಿಂದ ಪರೀಕ್ಷಾ ಗೌಪ್ಯತೆಯ ನಿಯಮಗಳಿಗೆ ಒಳಪಟ್ಟು ಸಿದ್ಧಪಡಿಸಲಾಗುವುದು. ಆದಾಗ್ಯೂ ಸಹ ಪ್ರಶ್ನೆ ಪತ್ರಿಕೆಗಳಲ್ಲಿನ ಪ್ರಶ್ನೆ/ಆಯ್ಕೆಗಳಲ್ಲಿ ತಪ್ಪುಗಳಿದ್ದಲ್ಲಿ ಅಥವಾ ಮುದ್ರಣ ದೋಷದಿಂದಾಗಿ ತಪ್ಪುಗಳಾಗಿದ್ದಲ್ಲಿ ವಿಷಯ ಪರಿಣಿತರ ಸಮಿತಿಯ ತೀರ್ಮಾನದಂತೆ ಅಂತಹ ಪ್ರಶ್ನೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸದೆ Delete ಮಾಡಲಾಗುವುದು ಹಾಗೂ **ಯಾವುದೇ ಕೃಪಾಂಕ ನೀಡಲಾಗುವುದಿಲ್ಲ** Delete ಮಾಡಲಾದ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಪ್ರಶ್ನೆಗಳನ್ನು ಮಾತ್ರ ಪರಿಗಣಿಸಿ ಪತ್ರಿಕೆವಾರು ಅರ್ಹತಾ ಅಂಕಗಳನ್ನು

ನಿರ್ಧರಿಸಲಾಗುವುದು. ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಯ ಬಹುಆಯ್ಕೆ ಪ್ರಶ್ನೆ ಪತ್ರಿಕೆಯಲ್ಲಿನ ಉತ್ತರಗಳಲ್ಲಿನ ಮುದ್ರಣ ದೋಷಗಳಿಗೆ ಸಂಬಂಧಿಸಿದಂತೆ ವಿಷಯ ಪರಿಣಿತರ ಸಮಿತಿಯ ಪರಿಶೀಲನಾ ವರದಿಯೇ ಅಂತಿಮವಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುವುದು.

**i.** ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಮುದ್ರಿತವಾಗಿರುತ್ತದೆ. ಮೂಲ ಪ್ರಶ್ನೆಯು ಆಂಗ್ಲ ಮಾಧ್ಯಮದಲ್ಲಿ ಕೂಡಿರುತ್ತದೆ. ಅಭ್ಯರ್ಥಿಯು ಆಂಗ್ಲ ಭಾಷೆಯ ಪ್ರಶ್ನೆಯನ್ನೇ ಮೂಲ ಪ್ರಶ್ನೆಯೆಂದು ಪರಿಗಣಿಸುವುದು.

**ii.** ಬಿ.ಇಡಿ/ಡಿ.ಇಡಿ/ಡಿ.ಇಎಲ್.ಇಡಿ/ವಿಶೇಷ ಶಿಕ್ಷಣದಲ್ಲಿ ಡಿಪ್ಲೋಮಾ ಅಥವಾ ಬಿ.ಇಡಿ (ವಿಶೇಷ ಶಿಕ್ಷಣ) / ತತ್ಸಮಾನ ವಿದ್ಯಾರ್ಹತೆಯ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಅಂಕಗಳಲ್ಲಿ ಯಾವುದು ಹೆಚ್ಚಿದೆಯೋ ಅದನ್ನು ಕರ್ನಾಟಕ ರಾಜ್ಯ ಪತ್ರ No: DPAR 19 SCR 2006, Bangalore, dated 14 August, 2006 sl.no.6 (A)

(i) Where the qualifying examination consists of more than one examination the percentage of total marks secured in the qualifying examination shall be the average percentage of marks secured in those Examinations for determination of order of merit.

(ii) Where different qualifying examinations have been prescribed alternatively in the Rules of Recruitment applicable to a post or category of posts and a candidate has passed more than one such qualifying examination, the percentage of total marks obtained in such qualifying examination in which he has obtained highest percentage of total marks will be considered for determination of order of merit - ಆದೇಶದಂತೆ ಮೆರಿಟ್ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದು.

ಆದರೆ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಹುದ್ದೆಗೆ ಸಂಬಂಧಿಸಿದಂತೆ ಬಿ.ಇಡಿ/ಬಿ.ಪಿ.ಇಡಿ (ತತ್ಸಮಾನ) ನಲ್ಲಿ ಸಂಬಂಧಪಟ್ಟ ಹುದ್ದೆಯ ಬೋಧನಾ ವಿಧಾನವನ್ನು ಅಭ್ಯಾಸ ಮಾಡಿರತಕ್ಕದ್ದು, ಮತ್ತು ಬಿ.ಇಡಿ/ಬಿ.ಪಿ.ಇಡಿ (ತತ್ಸಮಾನ) ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಯು ಆನ್‌ಲೈನ್ ಸಲ್ಲಿಸುವಾಗ ಅರ್ಜಿಯ ನಿಗದಿತ ಅಂಕಣದಲ್ಲಿ ಬಿ.ಇಡಿ/ಬಿ.ಪಿ.ಇಡಿ/ತತ್ಸಮಾನ ವಿದ್ಯಾರ್ಹತೆಯ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ನಂತರದಲ್ಲಿ ಈ ಬಗ್ಗೆ ನಮೂದಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ತಮ್ಮ ಬಿ.ಇಡಿ/ಬಿ.ಪಿ.ಇಡಿ/ತತ್ಸಮಾನ ಬಿ.ಎ. ಬಿ.ಇಡಿ /ಬಿ.ಎಸ್ಸಿ. ಬಿ.ಇಡಿ ಹಾಗೂ ಸ್ನಾತಕೋತ್ತರ ಪದವಿಯ ವಿದ್ಯಾರ್ಹತೆಯ ಅಂಕಗಳನ್ನು ನಮೂದಿಸುವಾಗ ಗ್ರೇಡ್ ಪಾಯಿಂಟ್ ಬದಲಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯದ ನಿಯಮಾನುಸಾರ ಸಮಾನಾಂತರ ಶೇಕಡವಾರು ಅಂಕಗಳನ್ನು ಕಡ್ಡಾಯವಾಗಿ ನಮೂದಿಸುವುದು. ನಂತರದಲ್ಲಿ ಈ ಬಗ್ಗೆ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

**iii.** ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯ ಗರಿಷ್ಠ ಅಂಕಗಳು ಮತ್ತು ಪಡೆದ ಅಂಕಗಳಲ್ಲಿ ವ್ಯತ್ಯಾಸವಾದಲ್ಲಿ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ.

**iv.** ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯು ಅಂತಿಮವಾಗಿರುತ್ತದೆ. ನಂತರದಲ್ಲಿ ಯಾವುದೇ ಮಾಹಿತಿಗಳ ಬದಲಾವಣೆಗೆ ಅವಕಾಶವಿರುವುದಿಲ್ಲ. ಆನ್‌ಲೈನ್ ಅರ್ಜಿಯಲ್ಲಿನ ಅಭ್ಯರ್ಥಿಗಳ ಮಾಹಿತಿ ಬದಲಾವಣೆ ತಿದ್ದುಪಡಿ ಕುರಿತಂತೆ ಯಾವುದೇ ಮನವಿಯನ್ನು ಸ್ವೀಕರಿಸುವುದಿಲ್ಲ.

**v.** ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಒಮ್ಮೆ ಮಾಹಿತಿ ತುಂಬಿ ಅಂತಿಮವಾಗಿ ಸಲ್ಲಿಸಿದ ಮೇಲೆ ಯಾವುದೇ ತಿದ್ದುಪಡಿಗೆ, ಹೊಸ ವಿವರಗಳನ್ನು ಸೇರ್ಪಡೆ ಮಾಡಲು ಅಥವಾ ತೆಗೆಯಲು ಅವಕಾಶವಿರುವುದಿಲ್ಲ. ಈ ಸಂಬಂಧ ಉದ್ಭವಿಸುವ ಪರಿಣಾಮಗಳಿಗೆ ಇಲಾಖೆಯು ಜವಾಬ್ದಾರಿಯಾಗಿರುವುದಿಲ್ಲ.

**vi.** ಪರೀಕ್ಷಾ ಸಾಮಗ್ರಿಗಳ ಸಂಗ್ರಹಣೆ GPTR-2026 ರ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಓ.ಎಂ.ಆರ್ ಉತ್ತರ ಪತ್ರಿಕೆಗಳನ್ನು ಮುಂದಿನ ನೇಮಕಾತಿ ಅಧಿಸೂಚನೆ ಹೊರಡಿಸುವವರೆಗೆ ಅಥವಾ 2 ವರ್ಷಗಳ ಅವಧಿ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಸಂರಕ್ಷಿಸಿ ಇಡಲಾಗುವುದು.

**vii.** ಪರೀಕ್ಷಾ ಕೇಂದ್ರದ ಬದಲಾವಣೆಗೆ ಯಾವುದೇ ಸಮಯದಲ್ಲಿ ಮತ್ತು ಹಂತದಲ್ಲಿ ಅವಕಾಶ ಇರುವುದಿಲ್ಲ.

**26]ಲಿಪಿಕಾರ (Scribe)**

ಭಾರತ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಮತ್ತು ಅಂಗವೈಕಲ್ಯ ಮಾರ್ಗಸೂಚಿಗಳ ಇಲಾಖೆಯ OMF.No. 16-110/2003-DD.III dated 26-02-2013 GPTR ನಿಯಮಗಳು ಅಂಗವೈಕಲ್ಯತೆಯುಳ್ಳ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ.

i. ಪರೀಕ್ಷಾ ಸಹಾಯಕರನ್ನು ಬಳಸಿಕೊಂಡು GPTR-2026ರ ಪರೀಕ್ಷೆ ಬರೆಯುತ್ತಿರುವ ವಿಕಲಚೇತನ ಅಭ್ಯರ್ಥಿಗಳಿಗೆ ಪ್ರತಿ ಪತ್ರಿಕೆಯ ಪ್ರತಿ ಗಂಟೆಗೆ 20 ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು. ಪರೀಕ್ಷಾ ಸಹಾಯಕರನ್ನು ಬಳಸಿಕೊಳ್ಳದ ಇತರೆ ವಿಕಲಚೇತನ ಅಭ್ಯರ್ಥಿಗಳಿಗೂ ಸಹ ಪ್ರತಿ ಪತ್ರಿಕೆಯ ಪ್ರತಿ ಗಂಟೆಗೆ 20 ನಿಮಿಷಗಳ ಹೆಚ್ಚಿನ ಕಾಲಾವಕಾಶದ ಸೌಲಭ್ಯವನ್ನು ನೀಡಲಾಗುವುದು.

ii. ಶೇ.40ಕ್ಕೂ ಹೆಚ್ಚು ಅಂಗವೈಕಲ್ಯವನ್ನು ಹೊಂದಿರುವ ವಿಕಲಚೇತನ ಅಭ್ಯರ್ಥಿಗಳು ಇಚ್ಛಿಸಿದಲ್ಲಿ ಪರೀಕ್ಷಾ ಸಹಾಯಕರನ್ನು ಬಳಸಿಕೊಳ್ಳುವ ಅವಕಾಶವಿರುತ್ತದೆ.

iii. ಅಭ್ಯರ್ಥಿಗಳು ಅಗತ್ಯತೆಗನುಗುಣವಾಗಿ ಪರೀಕ್ಷಾ ಸಹಾಯಕರನ್ನು ತಾವೇ ನೇಮಿಸಿಕೊಳ್ಳುವುದು ಅಥವಾ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಪರೀಕ್ಷಾ ಸಹಾಯಕರನ್ನು ಒದಗಿಸಲು ಮನವಿ ಮಾಡಿಕೊಳ್ಳುವುದು. ಪರೀಕ್ಷಾ ದಿನಾಂಕಕ್ಕಿಂತ ಒಂದು ದಿನ ಮುಂಚಿತವಾಗಿ ಸಂಬಂಧಪಟ್ಟ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳುವುದು.

iv. ಲಿಪಿಕಾರರನ್ನು (ಸ್ಕ್ರೈಬ್) ಒದಗಿಸಿದಲ್ಲಿ ಅಭ್ಯರ್ಥಿ ವಿದ್ಯಾರ್ಹತೆಯು ಪರೀಕ್ಷೆಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಗಿಂತ ಹೆಚ್ಚಿರಬಾರದು. ಆದಾಗ್ಯೂ ಲಿಪಿಕಾರನು (ಸ್ಕ್ರೈಬ್) ಹೊಂದಿರುವ ವಿದ್ಯಾರ್ಹತೆಯು ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಗಿಂತ ಕಡಿಮೆ ಇರತಕ್ಕದ್ದಲ್ಲ. ಆದರೆ, ತನ್ನದೇ ಆದ ಲಿಪಿಕಾರರನ್ನು (ಸ್ಕ್ರೈಬ್) ಕರೆತರಲು ಅಭ್ಯರ್ಥಿಗೆ ಅವಕಾಶ ಕಲ್ಪಿಸಿದಲ್ಲಿ, ಅಂತಹ ಲಿಪಿಕಾರನು (ಸ್ಕ್ರೈಬ್) ಹೊಂದಿರುವ ವಿದ್ಯಾರ್ಹತೆಯು ಸದರಿ ಅಭ್ಯರ್ಥಿಯು ಹೊಂದಿರುವ ವಿದ್ಯಾರ್ಹತೆಗಿಂತ ಒಂದು ಹಂತ ಕೆಳಗಿರಬೇಕು. ಇದಕ್ಕಾಗಿ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಲಿಪಿಕಾರನ ವಿವರಗಳನ್ನು ಸಲ್ಲಿಸತಕ್ಕದ್ದು. ಬದಲಿಗೆ ಪರೀಕ್ಷಾ ಮೇಲ್ವಿಚಾರಣೆ ವ್ಯವಸ್ಥೆಯನ್ನು ಬಲಗೊಳಿಸಿ ಅಭ್ಯರ್ಥಿಗಳಿಗೆ ನೀಡಲಾಗಿರುವ ಪರೀಕ್ಷಾ ಸಹಾಯಕರು ಯಾವುದೇ ರೀತಿಯ ಪರೀಕ್ಷಾ ಅವ್ಯವಹಾರದಲ್ಲಿ (ನಕಲು ಅಥವಾ ಇನ್ಯಾವುದೇ ರೀತಿಯ ಅನಪೇಕ್ಷಿತ ವರ್ತನೆಯಲ್ಲಿ) ತೊಡಗುವುದನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಿದೆ.

v. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಂದ ವಿಕಲಚೇತನ ಅಭ್ಯರ್ಥಿಗಳಿಗೆ ಪರೀಕ್ಷೆ ಪ್ರಾರಂಭಕ್ಕಿಂತ ಮುಂಚೆ ಕೆಳಮಹಡಿಯಲ್ಲಿ ಸೂಕ್ತವಾದ ಸ್ಥಳಾವಕಾಶ ಒದಗಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಇಲಾಖೆಯ ವೆಬ್ ಸೈಟ್ https://schooleducation.karnataka.gov.in/ ರಲ್ಲಿ ನೀಡಿರುವ ಸೂಚನೆಗಳನ್ನು ಗಮನಿಸಬಹುದು ಹಾಗೂ ಯಾವುದೇ ಹೆಚ್ಚಿನ ಸ್ಪಷ್ಟೀಕರಣಕ್ಕೆ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಇವರ ಕಚೇರಿಯನ್ನು **ಸಂಪರ್ಕಿಸಬಹುದು.**

**ಸಹಾಯವಾಣಿ :-ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿನ ಸಹಾಯವಾಣಿ ಸಂಖ್ಯೆ: 22483145,22483140,9483024723ಗಳನ್ನುಸಂಪರ್ಕಿಸಬಹುದು.**

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

**ಅನುಬಂಧ (Roster Table)**

**ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ.**

**6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ**

**ಜಿಲ್ಲೆಯಹೆಸರು:ದಾವಣಗೆರೆ**

**ವಿಷಯ : ಜಿಪಿಟಿ ಕನ್ನಡ**

| ಹಿಂದಿನಸಾಲಿನ ಉಳಿಕೆ | ಪ್ರಕಟಿತ ಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ | | | | | | | | |
|---|---|---|---|---|---|---|---|---|---|---|---|---|---|
| | | | | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗ ಅಭ್ಯರ್ಥಿ | ಒಟ್ಟು |
| 0 | 32 | 32 | 1 | ಸಾಮಾನ್ಯ | 2 | 6 | 5 | 1 | 1 | | 1* | | 16 |
| | | | 2 | ಪ.ಜಾತಿ | | | | | | | | | |
| | | | 3 | ಪ.ಜಾತಿ-ಎ | 1 | 1 | | | | | | | 2 |
| | | | 4 | ಪ.ಜಾತಿ-ಬಿ | 1 | 1 | | | | | | | 2 |
| | | | 5 | ಪ.ಜಾತಿ-ಸಿ | #1 | | | | | | | | 1 |
| | | | 6 | ಪ.ಪಂಗಡ | 1 | | | | | | | | 1 |
| | | | 7 | ಪ್ರವರ್ಗ-1 | 1 | 1 | | | | | | | 2 |
| | | | 8 | 2-ಎ | 1 | 2 | 1 | | | | 1* | | 5 |
| | | | 9 | 2-ಬಿ | 1 | | | | | | | | 1 |
| | | | 10 | 3-ಎ | 1 | | | | | | | | 1 |
| | | | 11 | 3-ಬಿ | 1 | | | | | | | | 1 |
| | | | | ಒಟ್ಟು | 11 | 11 | 6 | 1 | 1 | | 2 | | 32 |

ವಿ.ಸೂ- *ಅಂಗವಿಕಲ ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿ ದೃಷ್ಟಿಮಾಂದ್ಯ-01 , 2ಎ ಅಭ್ಯರ್ಥಿ ದೃಷ್ಟಿಮಾಂದ್ಯ -01 ಮೀಸಲಿರಿಸಿದೆ.
(GM PH 1-BLV, 2A PH 1- BLV)

# ಪರಿಶಿಷ್ಟ ಜಾತಿ ಪ್ರವರ್ಗ ಸಿ- ಗೆ ಲಭ್ಯವಾಗುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರವರ್ಗ ಸಿ ಯಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಿದೆ.ಒಂದು ವೇಳೆ ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದಿದ್ದಲ್ಲಿ ಈ ಹುದ್ದೆಗಳನ್ನು ಪ್ರವರ್ಗ ಸಿ ಯ ಇತರೆ ಜಾತಿಗಳ ಅರ್ಹ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

**ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ**

**6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ**

**ಜಿಲ್ಲೆಯಹೆಸರು:ದಾವಣಗೆರೆ**

**ವಿಷಯ : ಜಿಪಿಟಿ ಆಂಗ್ಲಭಾಷೆ**

| ಹಿಂದಿನಸಾಲಿನ ಉಳಿಕೆ | ಪ್ರಕಟಿತ ಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ: ಇತರೆ | ಮಹಿಳೆ | ಗ್ರಾಮೀಣ | ಮಾಜಿಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗ ದ ಅಭ್ಯರ್ಥಿ | ಒಟ್ಟು |
|---|---|---|---|---|---|---|---|---|---|---|---|---|---|
| 1 | 10 | 11 | 1 | ಸಾಮಾನ್ಯ | 1 | 2 | 1 | | | | 1* | | 5 |
| | | | 2 | ಪ.ಜಾತಿ | 1 | 1 | | | | | | | 2 |
| | | | 3 | ಪ.ಜಾತಿ-ಎ | | | | | | | | | |
| | | | 4 | ಪ.ಜಾತಿ-ಬಿ | | | | | | | | | |
| | | | 5 | ಪ.ಜಾತಿ-ಸಿ | | | | | | | | | |
| | | | 6 | ಪ.ಪಂಗಡ | | | | | | | | | |
| | | | 7 | ಪ್ರವರ್ಗ-1 | 1 | | | | | | | | 1 |
| | | | 8 | 2-ಎ | 1 | | | | | | | | 1 |
| | | | 9 | 2-ಬಿ | 1 | | | | | | | | 1 |
| | | | 10 | 3-ಎ | | | | | | | | | |
| | | | 11 | 3-ಬಿ | | | | | | | | | |
| | | | | ಒಟ್ಟು | 5 | 3 | 1 | | | | 1 | | 10 |

ವಿ.ಸೂ- *ಅಂಗವಿಕಲ ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿ ದೃಷ್ಟಿಮಾಂದ್ಯ-01 , ಮೀಸಲಿರಿಸಿದೆ.
(GM PH 1-BLV, )

| | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ಬ್ಯಾಕ್‌ಲಾಗ್ ಹುದ್ದೆಗಳು – 01 (ಜಿಪಿಟಿ ಆಂಗ್ಲಭಾಷೆ): ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯ ಲಿಂಗದ ಅಭ್ಯರ್ಥಿ | ಒಟ್ಟು |
|---|---|---|---|---|---|---|---|---|---|---|
| 01 | ಸಾಮಾನ್ಯ | | | | | | | | | |
| 02 | ಪ.ಜಾತಿ | | | | | | | | | |
| 03 | ಪ.ಜಾತಿ-ಎ | | | | | | | | | |
| 04 | ಪ.ಜಾತಿ-ಬಿ | | | | | | | | | |
| 05 | ಪ.ಜಾತಿ-ಸಿ | | | | | | | | | |
| 06 | ಪ.ಪಂಗಡ | | | | | | | | | |
| 07 | ಪ್ರವರ್ಗ-1 | | | | | | | | | |
| 08 | 2-ಎ | | | | | | | | | |
| 09 | 2-ಬಿ | | | | | | | | | |
| 10 | 3-ಎ | 1 | | | | | | | | 1 |
| 11 | 3-ಬಿ | | | | | | | | | |
| ಒಟ್ಟು | | 1 | | | | | | | | 1 |

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರ ಜಿಲ್ಲೆ

| ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ. | | | | | | | | | | | | | |
|---|---|---|---|---|---|---|---|---|---|---|---|---|---|
| 6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ | | | | | | | | | | | | | |
| ಜಿಲ್ಲೆಯಹೆಸರು:ದಾವಣಗೆರೆ | | | | | | | | | | | | | |
| ವಿಷಯ : ಜಿಪಿಟಿ ಗಣಿತ ವಿಜ್ಞಾನ (ಕನ್ನಡ ಮಾಧ್ಯಮ) | | | | | | | | | | | | | |
| ಹಿಂದಿನಸಾಲಿನ ಉಳಿಕೆ | ಪ್ರಕಟಿತ ಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ | | | | | | | | |
| | | | | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗದ ಅಭ್ಯರ್ಥಿ | ಒಟ್ಟು |
| 14 | 47 | 61 | 1 | ಸಾಮಾನ್ಯ | 3 | 8 | 6 | 2 | 1 | 1 | 1* | 1 | 23 |
| | | | 2 | ಪ.ಜಾತಿ | | | | | | | | | |
| | | | 3 | ಪ.ಜಾತಿ-ಎ | 1 | 1 | 1 | | | | | | 3 |
| | | | 4 | ಪ.ಜಾತಿ-ಬಿ | 1 | 1 | | | | | | | 2 |
| | | | 5 | ಪ.ಜಾತಿ-ಸಿ | #1 | 1 | | | | | | | 2 |
| | | | 6 | ಪ.ಪಂಗಡ | 1 | 1 | | | | | | | 2 |
| | | | 7 | ಪ್ರವರ್ಗ-1 | 1 | 1 | | | | | | | 2 |
| | | | 8 | 2-ಎ | 1 | 2 | 2 | | | | 1* | | 6 |
| | | | 9 | 2-ಬಿ | 1 | 1 | | | | | | | 2 |
| | | | 10 | 3-ಎ | 1 | 1 | | | | | | | 2 |
| | | | 11 | 3-ಬಿ | 1 | 1 | 1 | | | | | | 3 |
| | | | | ಒಟ್ಟು | 12 | 18 | 10 | 2 | 1 | 1 | 2 | 1 | 47 |

ವಿ.ಸೂ- * GM_PH 1-BLV, 2A PH 1- BLV

# ಪರಿಶಿಷ್ಟ ಜಾತಿ ಪ್ರವರ್ಗ ಸಿ- ಗೆ ಲಭ್ಯವಾಗುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರವರ್ಗ ಸಿ ಯಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಿದೆ.ಒಂದು ವೇಳೆ ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದಿದ್ದಲ್ಲಿ, ಈ ಹುದ್ದೆಗಳನ್ನು ಪ್ರವರ್ಗ ಸಿ ಯ ಇತರೆ ಜಾತಿಗಳ ಅರ್ಹ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

| | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ಬ್ಯಾಕ್‌ಲಾಗ್ ಹುದ್ದೆಗಳು – 14 ( ಜಿಪಿಟಿ ಗಣಿತ ವಿಜ್ಞಾನ) (ಕನ್ನಡ ಮಾಧ್ಯಮ) | | | | | | | | |
|---|---|---|---|---|---|---|---|---|---|---|
| | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯ ಲಿಂಗದ ಅಭ್ಯರ್ಥಿ | ಒಟ್ಟು |
| 01 | ಸಾಮಾನ್ಯ | | | | | | | | | |
| 02 | ಪ.ಜಾತಿ | 3 | | 1 | | | | 1* | | 5 |
| 03 | ಪ.ಜಾತಿ-ಎ | | | | | | | | | |
| 04 | ಪ.ಜಾತಿ-ಬಿ | | | | | | | | | |
| 05 | ಪ.ಜಾತಿ-ಸಿ | | | | | | | | | |
| 06 | ಪ.ಪಂಗಡ | | | | | | | | | |
| 07 | ಪ್ರವರ್ಗ-1 | 1 | | | | | | | | 1 |
| 08 | 2-ಎ | 4 | | 2 | | | | 1* | | 7 |
| 09 | 2-ಬಿ | | | | | | | | | |
| 10 | 3-ಎ | 1 | | | | | | | | 1 |
| 11 | 3-ಬಿ | | | | | | | | | |
| ಒಟ್ಟು | | 9 | | 3 | | | | 2 | | 14 |

ವಿ.ಸೂ- *ಅಂಗವಿಕಲ ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿ ದೃಷ್ಟಿಮಾಂದ್ಯ-01 , 2ಎ ಅಭ್ಯರ್ಥಿ ದೃಷ್ಟಿಮಾಂದ್ಯ -01 ಮೀಸಲಿರಿಸಿದೆ.
(GM PH 1-BLV, 2A PH 1- BLV)

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

| ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ | | | | | | | | | | | | | | |
|---|---|---|---|---|---|---|---|---|---|---|---|---|---|---|
| 6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ | | | | | | | | | | | | | | |
| ಜಿಲ್ಲೆಯ ಹೆಸರು:ದಾವಣಗೆರೆ | | | | | | | | | | | | | | |
| ವಿಷಯ : ಜಿಪಿಟಿ ಜೀವವಿಜ್ಞಾನ (ಕನ್ನಡ ಮಾಧ್ಯಮ) | | | | | | | | | | | | | | |
| ಬ್ಯಾಕ್ ಲಾಗ್ ಹುದ್ದೆಗಳು | | | | | | | | | | | | | | |
| ಹಿಂದಿನಸಾಲಿನ ಉಳಿಕೆ | ಪ್ರಕಟಿತ ಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ | | | | | | | | | |
| | | | | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗ ದ ಅಭ್ಯರ್ಥಿ | ಒಟ್ಟು |
| 4 | 0 | 4 | 1 | ಸಾಮಾನ್ಯ | | | | | | | | | |
| | | | 2 | ಪ.ಜಾತಿ | 1 | 1 | | | | | 1* | | 3 |
| | | | 3 | ಪ.ಜಾತಿ-ಎ | | | | | | | | | |
| | | | 4 | ಪ.ಜಾತಿ-ಬಿ | | | | | | | | | |
| | | | 5 | ಪ.ಜಾತಿ-ಸಿ | | | | | | | | | |
| | | | 6 | ಪ.ಪಂಗಡ | 1 | | | | | | | | 1 |
| | | | 7 | ಪ್ರವರ್ಗ-1 | | | | | | | | | |
| | | | 8 | 2-ಎ | | | | | | | | | |
| | | | 9 | 2-ಬಿ | | | | | | | | | |
| | | | 10 | 3-ಎ | | | | | | | | | |
| | | | 11 | 3-ಬಿ | | | | | | | | | |
| | | | | ಒಟ್ಟು | 2 | 1 | | | | | 1 | | 4 |

ವಿ.ಸೂ- *ಅಂಗವಿಕಲ ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿ ದೃಷ್ಟಿಮಾಂದ್ಯ-01 ಮೀಸಲಿರಿಸಿದೆ.
(GM PH 1-BLV,)

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

| ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ. | | | | | | | | | | | | | | |
|---|---|---|---|---|---|---|---|---|---|---|---|---|---|---|
| 6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ | | | | | | | | | | | | | | |
| ಜಿಲ್ಲೆಯಹೆಸರು : ದಾವಣಗೆರೆ | | | | | | | | | | | | | | |
| ವಿಷಯ : ಜಿಪಿಟಿ ಸಮಾಜ ವಿಜ್ಞಾನ (ಕನ್ನಡ ಮಾಧ್ಯಮ) | | | | | | | | | | | | | | |
| ಹಿಂದಿನಸಾಲಿನಉಳಿಕೆ | ಪ್ರಕಟಿತಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ | | | | | | | | | |
| | | | | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗದ ಅಭ್ಯರ್ಥಿ | ಒಟ್ಟು |
| 0 | 25 | 25 | 1 | ಸಾಮಾನ್ಯ | 2 | 5 | 3 | 1 | | | 1* | | 12 |
| | | | 2 | ಪ.ಜಾತಿ | | | | | | | | | |
| | | | 3 | ಪ.ಜಾತಿ-ಎ | 1 | 1 | | | | | | | 2 |
| | | | 4 | ಪ.ಜಾತಿ-ಬಿ | 1 | | | | | | | | 1 |
| | | | 5 | ಪ.ಜಾತಿ-ಸಿ | #1 | | | | | | | | 1 |
| | | | 6 | ಪ.ಪಂಗಡ | 1 | | | | | | | | 1 |
| | | | 7 | ಪ್ರವರ್ಗ-1 | 1 | | | | | | | | 1 |
| | | | 8 | 2-ಎ | 1 | 1 | 1 | | | | 1* | | 4 |
| | | | 9 | 2-ಬಿ | 1 | | | | | | | | 1 |
| | | | 10 | 3-ಎ | 1 | | | | | | | | 1 |
| | | | 11 | 3-ಬಿ | 1 | | | | | | | | 1 |
| | | | | ಒಟ್ಟು | 11 | 7 | 4 | 1 | | | 2 | | 25 |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ವಿ.ಸೂ- *ಅಂಗವಿಕಲ ಹುದ್ದೆಗಳನ್ನು ಸಾಮಾನ್ಯ ಅಭ್ಯರ್ಥಿ ದೃಷ್ಟಿಮಾಂದ್ಯ-01 , 2ಎ ಅಭ್ಯರ್ಥಿ ದೃಷ್ಟಿಮಾಂದ್ಯ -01 ಮೀಸಲಿರಿಸಿದೆ. (GM PH 1-BLV, 2A PH 1- BLV)

# ಪರಿಶಿಷ್ಟ ಜಾತಿ ಪ್ರವರ್ಗ ಸಿ- ಗೆ ಲಭ್ಯವಾಗುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರವರ್ಗ ಸಿ ಯಲ್ಲಿನ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಮೀಸಲಿರಿಸಿದೆ.ಒಂದು ವೇಳೆ ಈ 59 ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರು ಲಭ್ಯವಾಗದಿದ್ದಲ್ಲಿ ಈ ಹುದ್ದೆಗಳನ್ನು ಪ್ರವರ್ಗ ಸಿ ಯ ಇತರೆ ಜಾತಿಗಳ ಅರ್ಹ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

**ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ**

**6-8ನೇ ತರಗತಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಪ್ರಕಟಿಸಲಾದ ಖಾಲಿ ಹುದ್ದೆಗಳ ವರ್ಗೀಕರಣ**

**ಜಿಲ್ಲೆಯಹೆಸರು:ದಾವಣಗೆರೆ**

**ವಿಷಯ : ಸಿಎಸ್ಟಿ (ಕಂಪ್ಯೂಟರ್ ಶಿಕ್ಷಕರು)**

| ಹಿಂದಿನಸಾಲಿನ ಉಳಿಕೆ | ಪ್ರಕಟಿತ ಹುದ್ದೆಗಳು | ಒಟ್ಟು ಹುದ್ದೆಗಳು | ಕ್ರ. ಸಂ | ಪ್ರವರ್ಗವಾರು ಮೀಸಲಾತಿ ವರ್ಗೀಕರಣ | ವರ್ಗೀಕರಣ | | | | | | | | |
|---|---|---|---|---|---|---|---|---|---|---|---|---|---|
| | | | | | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ತೃತೀಯಲಿಂಗ ಅಭ್ಯರ್ಥಿ | ಒಟ್ಟು |
| | | | 1 | ಸಾಮಾನ್ಯ | 1 | 1 | 1 | | | | | | 3 |
| | | | 2 | ಪ.ಜಾತಿ | 1 | | | | | | | | 1 |
| | | | 3 | ಪ.ಜಾತಿ-ಎ | | | | | | | | | |
| | | | 4 | ಪ.ಜಾತಿ-ಬಿ | | | | | | | | | |
| | | | 5 | ಪ.ಜಾತಿ-ಸಿ | | | | | | | | | |
| 0 | 6 | 6 | 6 | ಪ.ಪಂಗಡ | 1 | | | | | | | | 1 |
| | | | 7 | ಪ್ರವರ್ಗ-1 | 1 | | | | | | | | 1 |
| | | | 8 | 2-ಎ | | | | | | | | | |
| | | | 9 | 2-ಬಿ | | | | | | | | | |
| | | | 10 | 3-ಎ | | | | | | | | | |
| | | | 11 | 3-ಬಿ | | | | | | | | | |
| | | | | ಒಟ್ಟು | 4 | 1 | 1 | | | | | | 6 |

ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಿಗಳು ಹಾಗೂ,
ಜಿಲ್ಲಾ ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ

**ವಿಶೇಷ ಸೂಚನೆ:** ಈ ಅಧಿಸೂಚನೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರವು ಪರೀಕ್ಷಾ ದಿನಾಂಕಕ್ಕೆ ಮೊದಲು ಬದಲಾವಣೆ ಬಯಸಿದಲ್ಲಿ ಅಷ್ಟಕ್ಕೆ ಸೀಮಿತವಾಗಿ ಮಾತ್ರ ನೇಮಕಾತಿ ಪ್ರಾಧಿಕಾರದಿಂದ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗುವುದು.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU Date: 2026.08.12 00:59:30 +05'30'